ಶ್ರೀ ತಂಗವೇಲು, ಸ್ವಾತಂತ್ರ್ಯ ಹೋರಾಟಗಾರರು, ಇವರಿಗೆ ಬೆಂಗಳೂರು ನಗರ ಸಭೆಯವರು ೯೯ ವರ್ಷಗಳವರಿಗೆ ೧೨X೧೫ ಅಡಿ ಜಾಗವನ್ನು ಲೀಸ್ ಕೊಟ್ಟಿರುವುದು.

ಶ್ರೀ ಎಸ್. ಬಂಗಾರಪ್ಪ,—೧೯೩೫ರ ನಂತರದ ದಿನಗಳಲ್ಲಿ ಶ್ರೀ ಭಾಷ್ಯಂ ಅವರ ನಾಯಕತ್ವದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಮತ್ತು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರೀಯವಾಗಿ ಪಾಲ್ಗೊಂಡ ಶ್ರೀ ಪಿ. ತಂಗವೇಲು (ಸ್ವಾತಂತ್ರ್ಯ ಹೋರಾಟಗಾರರು) ಇವರಿಗೆ ೧೯೫೪ರಲ್ಲಿ ಬೆಂಗಳೂರು ನಗರ ಕಾರ್ಪೋರೇಷನ್‌ನವರು ಬಿನ್ನಿಮಿಲ್ ಮುಂಭಾಗ (ಇಂಡಿಯನ್ ಆಯಿಲ್ ಕಂಪನಿ) ಎದುರು ೧೨ ಅಡಿ ಮತ್ತು ೧೫ ಅಡಿ ಅಳತೆಯುಳ್ಳ ಒಂದು ಜಾಗವನ್ನು ೯೯ ವರ್ಷಗಳಿಗೆ ಗುತ್ತಿಗೆ ಯಾಗಿ ನೀಡಿತ್ತು. ಆ ಜಾಗದಲ್ಲಿ ಶ್ರೀ ತಂಗವೇಲು ಅವರು ಕಾಫಿ ಬಾರ್ ನಡೆಸುತ್ತಿದ್ದರು ಮತ್ತು ೧೯೬೦ರಲ್ಲಿ ಅದೇ ಅಳತೆಯುಳ್ಳ ಜಾಗವನ್ನು ಮನೆ ನಿರ್ಮಾಣಕ್ಕಾಗಿ ಮಂಜೂರಾತಿ ಪಡೆದು ಕಾಫಿ ಬಾರ್ ಪಕ್ಕದಲ್ಲೇ ಸ್ವಂತ ವಾಸದ ಮನೆಯನ್ನೂ ನಿರ್ಮಿಸಿಕೊಂಡು ವಾಸಿಸುತ್ತಿದ್ದರು. ದಿನಾಂಕ ೫-೬-೧೯೮೫ರಂದು ಶ್ರೀ ತಂಗವೇಲು ಇವರು ವಾಸಿಸುತ್ತಿದ್ದ ಮನೆಯ ಮುಂಭಾಗದಲ್ಲಿದ್ದ, ಅಕ್ರಮ ವೆಂದು ಪರಿಗಣಿಸಲಾದ ಅರಮನೆನಗರ ಕೊಳಗೇರಿಯಲ್ಲಿನ ಸುಮಾರು ೩೬ ಗುಡಿಸಲುಗಳನ್ನು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಲಿಯವರು ೨೪ ಗಂಟೆಗಳ ಮುಂಚಿತ ಸೂಚನೆ ನೀಡಿ ನಾಶಪಡಿಸಿದರು. ಇದೇ ಸಂದರ್ಭದಲ್ಲಿ ಶ್ರೀ ತಂಗವೇಲುರವರ ಕಾಫಿ ಬಾರನ್ನೂ ಒಳಗೊಂಡಂತೆ ಅದರ ಮನೆಯನ್ನೂ ಅಕ್ರಮ ನಿರ್ಮಾಣವೆಂದು ನಾಶಪಡಿಸಿದರು. ನಿರ್ಮಾಣ ಅಧಿಕೃತವೆಂಬುದಕ್ಕೆ ಪೂರಕವಾಗಿದ್ದ ಗುತ್ತಿಗೆಗೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ತೋರಿಸಲು ಐದು ನಿಮಿಷಗಳ ಕಾಲಾವಧಿಯನ್ನೂ ಸಹ ಶ್ರೀ ತಂಗವೇಲುರವರಿಗೆ ನೀಡದೆ ಹೋಗಿದ್ದಾರೆ. ಸ್ವಾತಂತ್ರ್ಯ ಹೋರಾಟ ಗಾರರಾದ ಶ್ರೀ ತಂಗವೇಲುರವರು ಈ ನೆಲಸಮ ಕೃತ್ಯದಿಂದಾಗಿ ಒಂದು ಲಕ್ಷ ರೂಪಾಯಿಗಳ ಬೆಲೆ ಬಾಳುವ ವಸತಿಯನ್ನು ಕಳೆದುಕೊಂಡು ಸಂಸಾರದೊಂದಿಗೆ ನಿರ್ಗತಿಕರಾಗಿ ಬೀದಿಯಲ್ಲಿದ್ದಾರೆ.

ಆತನ ವಸತಿಯು ಅಧಿಕೃತ ನಿರ್ಮಾಣವಾಗಿದ್ದು ಇದಕ್ಕೆ ಸೂಕ್ತವಾದ ಪುರಾವೆಗಳಿದ್ದು ಬೆಂಗಳೂರು ನಗರ ಕಾರ್ಪೋರೇಷನ್ ಪತಿಯಿಂದ ನೀಡಲಾದ ಸ್ಥಳದಲ್ಲಿ ನಿರ್ಮಿಸಿದ್ದ ಮನೆಯನ್ನು ನಾಶಪಡಿಸಲು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಲಿಗೆ ಯಾವುದೇ ಅಧಿಕಾರವಿಲ್ಲ.

ತಮ್ಮ ಕೈಗೆ ಕಾನೂನನ್ನು ತೆಗೆದುಕೊಂಡ ಮನಸ್ವೀ ವರ್ತಿಸಿದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮಕೈಗೊಂಡು ನಿರ್ಗತಿಕನಾದ ಶ್ರೀ ತಂಗವೇಲು ಇವರಿಗೆ ಅದೇ ಸ್ಥಳದಲ್ಲಿ ವಸತಿಯನ್ನು ಪುನರ್ ನಿರ್ಮಿಸಲು ಅವಕಾಶ ಮಾಡಿಕೊಡಬೇಕೆಂದು ಈ ಕೃತ್ಯದಿಂದ ಆತನಿಗಾದ ನಷ್ಟವನ್ನು, ಸೂಕ್ತ ಪರಿಹಾರ ಕೊಡುವುದರ ಮೂಲಕ ತುಂಬಬೇಕೆಂದು ನಾನು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಈಗ ನನ್ನ ಹತ್ತಿರ ಇದಕ್ಕೆ ಸಂಬಂಧಪಟ್ಟ ಹಾಗೆ ವಿವರಗಳು ಯಾವುದೂ ಇಲ್ಲ. ಆದ್ದರಿಂದ ನಾನು ವಿವರಗಳನ್ನು ತರಿಸಿ ಅದಕ್ಕೆ ತಕ್ಕಂಥ ಉತ್ತರವನ್ನು ಸನ್ಮಾನ್ಯ ವಿರೋಧಪಕ್ಷದ ನಾಯಕರಿಗೆ ಒದಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರು ಉತ್ತರವನ್ನು ಒದಗಿಸಿಕೊಡುತ್ತೇವೆಂದು ಪತ್ರ ವ್ಯವಹಾರಗಳನ್ನು ನಡೆಸುವುದಾಗಿದ್ದರೆ ನಾವು ಕೂಡ ತಿಂಗಳ ನಿಯಮದ ಪ್ರಕಾರ ನೋಟೀಸುಗಳನ್ನು ಪೋಸ್ಟ್ ಆಫೀಸ್ ಮುಖಾಂತರವೇ ಕಳುಹಿಸಿಕೊಡಬಹುದಾಗಿತ್ತು. ನಾವು ಅಸೆಂಬ್ಲಿಯಲ್ಲಿ ಹೇಳಿಕೆ ಯನ್ನು ಕೊಟ್ಟಿರುತ್ತೇವೆ ಆದ್ದರಿಂದ ಅಸೆಂಬ್ಲಿಯಲ್ಲಿಯೇ ಅವರು ಉತ್ತರವನ್ನು ಕೊಡಬೇಕು ಉತ್ತರವನ್ನು ಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ತಿಂಗಳ ಬಗ್ಗೆ ಈಗಾಗಲೇ ಸಾಕಷ್ಟು ವಿಶ್ಲೇಷಣೆಗಳು ನಡೆದಿರುತ್ತವೆ. ಇಲ್ಲಿಯವರೆಗೂ ನಡೆದುಕೊಂಡು ಬಂದಿರತಕ್ಕಂಥ ಸಾಂಪ್ರದಾಯದ ಪ್ರಕಾರ ತಿಂಗಳ ಪ್ರಶ್ನೆಗಳಿಗೆ ಪೋಸ್ಟ್‌ನಲ್ಲಿ ಉತ್ತರಗಳನ್ನು ಕಳುಹಿಸಿಕೊಡುತ್ತಿದೆ ಎಂದು ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಪ್ರೋಸ್ಪ್ ಮುಖಾಂತರವಾಗಿ ಉತ್ತರಗಳನ್ನು ಕಳುಹಿಸಿಕೊಡಬಹುದೆಂದು ರೂಲ್ಸ್‌ನಲ್ಲಿ ಎಲ್ಲಿದೆ ?

ಶ್ರೀ ಕೆ. ಎಚ್. ಪಾಟೀಲ್.—ಅದಕ್ಕೋಸ್ಕರವಾಗಿಯೇ ಜೀರೋ ಹವರ್ ಇರಬೇಕೆಂದು ನಾವು ಹೇಳತಕ್ಕಂಥದ್ದು.

ಅಧ್ಯಕ್ಷರು.—ರೂಲ್ಸ್ ಕಮಿಟಿಯನ್ನು ಮಾಡಿದ್ದೇವೆ. ಅದರ ಬಗ್ಗೆ ನೋಡೋಣ. ಮಾನ್ಯ ಲಕ್ಷ್ಮೀಸಾಗರ್‌ರವರೇ ಮಾನ್ಯ ವಿರೋಧಪಕ್ಷದ ನಾಯಕರಾದ ಬಂಗಾರಪ್ಪನವರು ಕೇಳುವುದು ಯೋಗ್ಯವಾಗಿರುತ್ತದೆ. ಈ ಸಂದರ್ಭದಲ್ಲೇ ಉತ್ತರವನ್ನು ಇಲ್ಲಿಯೇ ಕೊಡುವುದು ಕೂಡ ಯೋಗ್ಯವಾಗಿರುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದೇನೆ. ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಲಿಲ್ಲ ?

ಶ್ರೀ ಎಸ್. ಬಂಗಾರಪ್ಪ.—ಉತ್ತರವನ್ನು ಈ ಸದನದಲ್ಲಿಯೇ ಕೊಡಬೇಕೆಂಬುದು ನಮ್ಮ ಅಪೇಕ್ಷೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರ ಅಪೇಕ್ಷೆಯಂತೆ ಉತ್ತರವನ್ನು ಒದಗಿಸಿಕೊಡುತ್ತೇವೆ. ಈವತ್ತಿನವರೆಗೂ ನಡೆದುಕೊಂಡು ಬಂದ ಸಂಪ್ರದಾಯದಂತೆ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಿಕೊಡುತ್ತೇವೆಂದು ಹೇಳಿರುತ್ತೇನೆ. ಇಲ್ಲೇ ಈಗಲೇ ಉತ್ತರವನ್ನು ಕೊಡಬೇಕೆಂದು ನಿಯಮಾವಳಿಯಲ್ಲಿ ಇಲ್ಲ.

ಅಧ್ಯಕ್ಷರು.—ರೂಲ್ಸ್‌ನಲ್ಲಿ ಇಲ್ಲದಿದ್ದರೆ ಪ್ರಿಸರ್ವ್ ಮಾಡಿ ರೂಲ್ಸ್‌ನಲ್ಲಿ ಹಾಕೋಣ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ ಸತ್ ಸಂಪ್ರದಾಯದ ಪ್ರಕಾರ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿಯೂ ಸಹ ತಕ್ಷಣ ಉತ್ತರಗಳನ್ನು ಒದಗಿಸಿಕೊಡಬೇಕೆಂದು ಒಪ್ಪಂದವಾಗಿರುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಆ ರೀತಿಯಾಗಿ ತೀರ್ಮಾನವಾಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಹಾಗಿದ್ದಪಕ್ಷದಲ್ಲಿ ಜೀರೋ ಹವರ್‌ನ್ನು ಪ್ರಾರಂಭ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಈಗಿಂದೀಗಲೆ ಜೀರೋ ಹವರ್‌ನ್ನು ಪ್ರಾರಂಭ ಮಾಡಿ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೇ ಜೀರೋ ಹವರ್‌ನಲ್ಲೂ ಕೂಡ ಈಗಿಂದೀಗಲೇ ಉತ್ತರ ಕೊಡುವಂತೆ ಇರುವುದಿಲ್ಲ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ ಈ ಸದನದಲ್ಲಿ ಪ್ರಶ್ನೆಗಳನ್ನು ಕೇಳುವ ಉದ್ದೇಶವಾದರೂ ಏನು ? ಪ್ರಶ್ನೆಗಳನ್ನು ಕೇಳತಕ್ಕಂಥದ್ದು ಸದಸ್ಯರ ಮೂಲಭೂತವಾದ ಹಕ್ಕು. ಪ್ರಶ್ನೆ ಕೇಳಿದಮೇಲೆ ಅದಕ್ಕೆ ಸಮಂಜಸವಾದ ಉತ್ತರಗಳು ಮಾನ್ಯ ಸಚಿವರಿಂದ ಬರುವುದಿಲ್ಲವೆಂದರೆ ಏನು ಅರ್ಥ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಈ ಮನೆಯ ಅಭಿಪ್ರಾಯವನ್ನು ಪಡದೇ ನಿಯಮಗಳನ್ನು ಮಾಡಿದ್ದೇವೆ. ಆ ನಿಯಮಗಳ ಪ್ರಕಾರ ಚರ್ಚೆಯಾಗಬೇಕು ಮತ್ತು ನಿಯಮಗಳ ಪ್ರಕಾರವಾಗಿಯೇ ಉತ್ತರಗಳನ್ನೂ ಸಹ ಕೊಡಬೇಕಾಗಿರುತ್ತದೆ ಹಿಂದಿನ ನಿಯಮಕ್ಕೆ ಪಾರ್ಲಿಮೆಂಟ್‌ನಲ್ಲೂ ಕೂಡ ಕಾನೂನಿಗೆ ಅನುಗುಣವಾಗಿ ನಿಯಮಗಳು ಇವೆ. ಅಲ್ಲೂ ಕೂಡ ಇಂಥ ವಿಷಯದ ಬಗ್ಗೆ ಸದಸ್ಯರು ನೋಟೀಸ್ ಕೊಟ್ಟಿದ್ದಾರೆಂದು ಸಭೆಯ ಗಮನಕ್ಕೆ ತರುತ್ತಾರೆ. ಆ ನೋಟೀಸ್‌ಗೆ ಮಂತ್ರಿಗಳು ಆಗಿದಾಗಲೇ ಉತ್ತರವನ್ನು ಕೊಡುವುದಿಲ್ಲ. ತಾವು ಅರ್ಥ ಮಾಡಿಕೊಳ್ಳಬೇಕು. ನಾವೂ ಕೂಡ ಪಾರ್ಲಿಮೆಂಟ್ ಸತ್‌ಸಂಪ್ರದಾಯದ ಪ್ರಕಾರ ನಡೆದುಕೊಳ್ಳುತ್ತಿದ್ದೇವೆಯೇ ಹೊರತು ನೋಟೀಸ್‌ಗೆ ಉತ್ತರವನ್ನು ಕೊಡಬಾರದೆಂದು ಏನೂ ಇಲ್ಲ. ನಿಯಮಗಳಿಗೆ ಅನುಗುಣವಾಗಿ ನಡೆದುಕೊಳ್ಳತಕ್ಕಂಥದ್ದು ಕೂಡ ಸತ್‌ಸಂಪ್ರದಾಯವಾಗಿರುತ್ತದೆ ನಿಯಮಗಳನ್ನು ಮಾಡುವುದಕ್ಕೆ ಈ ಮನೆಗೆ ಅಧಿಕಾರ ಇರುತ್ತದೆ. ಇಲ್ಲೂ ಕೂಡ ಆ ರೀತಿಯಾವ ರೂಲ್ಸ್

ಬಂದವೇಲೆ ತಿಳಿಳಿಕ್ಕೆ ಇಂದೇ ಉತ್ತರವನ್ನು ಕೊಡುವುದಕ್ಕೆ ಆಗದಿದ್ದರೆ ಆಮೇಲೆ ಒದಗಿಸತಕ್ಕಂಥ ಸತ್‌ಸಂಪ್ರದಾಯವನ್ನು ಮುಂದುವರಿಸಿಕೊಂಡು ಬಂದಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಬಂಗಾರಪ್ಪನವರು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದರೆ, ಸುಮ್ಮನೆ ಇರಬಹುದಾಗಿತ್ತು. ಈ ಸದನದಲ್ಲಿ ಯಾವುದೇ ಗಹನವಾದ ವಿಚಾರಗಳನ್ನು ಎಂದರೆ ಕಾಲಿಂಗ್ ಅಟೆಂಕ್ಷನ್, ಅಡ್ಜರ್ನ್‌ಮೆಂಟ್ ಮೋಷನ್, ನೋ ಕಾನ್‌ಫಿಡೆನ್ಸ್ ಮೋಷನ್ ತರಬೇಕಾದರೆ ಅವುಗಳನ್ನು ವಿಚಾರ ಮಾಡೇ ತರುತ್ತೇವೆ. ತಾವು ಈ ಸದನವನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಬರಬೇಕಾದರೆ ಸಮಂಜಸವಾದ ಉತ್ತರಗಳನ್ನು ಕೊಡಬೇಕಾಗುತ್ತದೆ ನಾವು ಯಾವುದೇ ಆಕ್ರಮಣ ಕೆಲಸ ಮಾಡಿಲ್ಲ, ಬಡವರಿಗೆ ಹಾನಿ ಮಾಡಿಲ್ಲ ಎಂಬುದನ್ನು ಈ ಸದನದಲ್ಲೇ ನೀವು ತೋರಿಸಬೇಕು. ಮಾನ್ಯ ವಿರೋಧಪಕ್ಷದ ನಾಯಕರು ಕೇಳುವಂಥ ಪ್ರಶ್ನೆಗೆ ಈ ಸದನದಲ್ಲಿ ಉತ್ತರವನ್ನು ಹೇಳುವುದಿಲ್ಲ. ಮನೆಯಲ್ಲಿ ಉತ್ತರವನ್ನು ಹೇಳುತ್ತೇವೆಂದು ಹೇಳಿದರೆ ಹೇಗೆ ?

ಶ್ರೀ ಜೆ. ಎಚ್ ಪಟೇಲ್.—ಲೋಕಸಭೆಯಲ್ಲಿ ಇರತಕ್ಕಂಥ ಒಂದು ಸತ್‌ಸಂಪ್ರದಾಯ ನನ್ನ ಅನುಭವದ ಪ್ರಕಾರ ಹೇಳ ತ್ತೇನೆ. ಯಾವುದಾದರೂ ಒಂದು ವಿಶಿಷ್ಟ ಘಟನೆ ನಡೆದಿದ್ದರೆ, ಆ ಘಟನೆಯ ಬಗ್ಗೆ ನೋಟೀಸ್ ಕೊಟ್ಟು ಸಭೆಯ ಗಮನಕ್ಕೆ ಸದಸ್ಯರು ತರುತ್ತಾರೆ. ನೋಟೀಸ್ ಕೊಟ್ಟನಂತರ ಘಟನೆ ನಡೆದಿದ್ದನ್ನು ಜೀರೋ ಹವರ್‌ನಲ್ಲಿ ಸಭೆಯ ಮೂಲಕ ಸರ್ಕಾರದ ಗಮನಕ್ಕೆ ತರುತ್ತಾರೆಯೇ ಹೊರತು ಅದಕ್ಕೆ ಯಾರೂ ಉತ್ತರವನ್ನು ತಕ್ಷಣ ಕೊಡುವುದಿಲ್ಲ. ಕಾನೂನು ಪ್ರಕಾರ ಉತ್ತರವನ್ನು ಕೊಡಬಾರದು ಎಂದು ಹೇಳುವಾಗ ಕೆಲವು ಘಟನೆಗಳಿಗೆ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಿದ್ದರೆ ಉತ್ತರವನ್ನು ಕೊಡಬಹುದು ಕೆಲವಕ್ಕೆ ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೆ ಇಲ್ಲ. ಉದಾಹರಣೆಗೆ ಕಾನಕಾನಹಳ್ಳಿ ಪೋಲೀಸ್ ಸ್ಟೇಷನ್ ಮುಂದೆ ಲಾರಿ ಹರಿದು ಆಕ್ಸಿಡೆಂಟ್ ಆಯಿತು. ಅಪಘಾತಕ್ಕೆ ಒಳಗಾದವನನ್ನು ಆಸ್ಪತ್ರೆಗೆ ಅಡ್ಮಿಟ್ ಮಾಡಲಾಗಿದೆ. ಆರೋಗ್ಯ ಮಂತ್ರಿಗಳು ಈಗಲೇ ಉತ್ತರವನ್ನು ಕೊಡಬೇಕೆಂದು ಹೇಳಿದರೆ ಹೇಗೆ ಸಾಧ್ಯವಾಗುತ್ತದೆ ಹಾಗೆಯೇ ಮಾನ್ಯ ಸಂಸದೀಯ ಮಂತ್ರಿಗಳಿಗೆ ಅವರು ಪ್ರಶ್ನೆ ಕೇಳಿದ್ದಾರೆ, ಅವರು ಉತ್ತರವನ್ನು ಒದಗಿಸುತ್ತಾರೆ. ಈ ರೀತಿ ನಾವೇ ಹಾಕಿಕೊಂಡ ನಿಯಮಕ್ಕೆ ಡಿಸಪ್ಲೈನ್ ಇಲ್ಲದಿದ್ದರೆ ತಿಳಿಳಿಕ್ಕೆ ಬಹಳ ಕಾಲ ಎಳೆದುಕೊಂಡು ಹೋಗುತ್ತದೆ. ಮಾನ್ಯ ಸದಸ್ಯರ ಸಮಸ್ಯೆಯೂ ಬಗೆಹರಿಯುವುದಿಲ್ಲ. ಇಂಥ ಒಂದು ಸಮಸ್ಯೆ ಇರುವುದರಿಂದ ಇದರ ಬಗ್ಗೆ ಪುನರಾಲೋಚನೆ ಮಾಡುವುದು ಒಳ್ಳೆಯದೆಂದು ನಾನು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ —ಇಲ್ಲಿ ಭಾಷಣಕ್ಕೆ ಅವಕಾಶವಿಲ್ಲ, ನಿಜ, ಆದರೆ ಇಲ್ಲಿ ಬಂಗಾರಪ್ಪನವರ ಇಚ್ಛೆ ಇಷ್ಟು. ಅವರು ಸದನದಲ್ಲೇ ಉತ್ತರ ಕೊಡಿ ಎಂದು ಹೇಳಿದ್ದಾರೆ. ಆದರೆ ಮಾನ್ಯ ಲಕ್ಷ್ಮೀಸಾಗರ್ ಅವರು ವಿವರಗಳನ್ನು ಒದಗಿಸಿಕೊಡುತ್ತೇನೆ ಎಂದು ಹೇಳಿದ್ದಾರೆ ಇಲ್ಲೇ ಉತ್ತರ ಕೊಡಬೇಕಾಗಿಲ್ಲ ಎಂದೂ ಅವರು ವಾಖ್ಯಾನ ಮಾಡಿದರೆ ಅದು ಸರಿಯಲ್ಲ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ಎಲ್ಲರಿಗೂ ಉತ್ತರ ಒದಗಿಸುತ್ತಿದ್ದೇವೆ. ಇಲ್ಲಿಯೇ ಒದಗಿಸಬೇಕೆಂದೇನೂ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.— ಬಿಜಿನೆಸ್ ಆಡ್ವೈಸರಿ ಕಮಿಟಿ ಸಭೆಯಲ್ಲಿ ಬೇಕಾದರೆ ಇದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ —ಸಭ್ಯತೆಗೆ ಉತ್ತರ ಬೇಕಾಗಿದೆ. ಶ್ರೀ ಲಕ್ಷ್ಮೀಸಾಗರ್ ಅವರು ಇಲ್ಲೇ ಉತ್ತರ ಒದಗಿಸಬೇಕಾಗಿಲ್ಲವೆಂದು ಹೇಳಿದ್ದಾರೆ...

ಅಧ್ಯಕ್ಷರು,— ನಿಯಮದಲ್ಲಿ ಅದು ಇಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಎಲ್ಲವೂ ರೂಲ್ಸ್‌ನಲ್ಲೇ ಇರುತ್ತದೆ. ನಾವು ಸಭೆಯ ಒಳಗೆ ಬಂದ ಕೂಡಲೇ ಅಧ್ಯಕ್ಷರಿಗೆ ನಮಸ್ಕಾರ ಮಾಡಬೇಕೆಂದು ರೂಲ್ಸ್‌ನಲ್ಲಿ ಹೇಳಿಲ್ಲ.

ಗೌರವ ತೋರಿಸುವುದು ನಮ್ಮ ಧರ್ಮ ಎಂದು ನಾವು ನಮಸ್ಕಾರ ಮಾಡುತ್ತೇವೆ. Sri Bangarappa, the leader of the Opposition is also having equal status of a Minister of Canbinet rank. He may get the information through post, that is a different matter. But the thing is, he wants to give a test to the Government on the floor of the House. It is the privilege. Therefore, I want to know whether they can furnish the answer in the House itself ?

ಅಧ್ಯಕ್ಷರು.—ಲಕ್ಷ್ಮೀಸಾಗರ್‌ರವರೇ, ಹೀಗೆ ಮಾಡೋಣ ನಿಮ್ಮ ಸರ್ಕಾರ ಇದೆ. ಉತ್ತರವನ್ನು ಸಾಧ್ಯವಾದರೆ ಇವತ್ತೇ ಕೊಡಿ, ಇಲ್ಲದಿದ್ದರೆ ನಾಳೆ ಸಭೆಯಲ್ಲಿಯೇ ಕೊಡಿ.

ಶ್ರೀ ಕೆ. ಎಚ್. ಪಾಟೀಲ್.— ಈಗ ನಾಳೆ ಎಂದು ಪ್ರಶ್ನೆ ಅಲ್ಲ. ಯಾವ ವಿಷಯ . ಪ್ರಸ್ತಾಪ ಆಗಿದೆ. ಆ ಬಗ್ಗೆ ಉತ್ತರವನ್ನು ಸದನದಲ್ಲೇ ಕೊಡಬೇಕೆಂದು ನಾವು ಕೇಳುತ್ತಿರುವುದು.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ,.....

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಈ ವಿಷಯವನ್ನು ನಾವು ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಚರ್ಚೆ ಮಾಡೋಣ.

ಶ್ರೀ ಕೆ. ಎಚ್. ಪಾಟೀಲ್.—ಅವರು ಆಮೇಲೆ ಉತ್ತರ ಕೊಡುವುದಾದರೆ ಇಂಥ ದಿವಸ ಪ್ರಶ್ನೆ ಕೇಳಿದ್ದರು—ಎಂದು ಇಲ್ಲಿಯೇ ಉತ್ತರ ಕೊಡುವುದಕ್ಕೆ ಸಾಧ್ಯವಿದೆ.

ಅಧ್ಯಕ್ಷರೇ.—ರೂಲ್ಸ್‌ನಲ್ಲಿ ಹಾಗೆ ಇಲ್ಲ.

(ಗೊಂದಲ)

ಶ್ರೀ ಕೆ. ಎಚ್. ಪಾಟೀಲ್.—ತಾವು ಇಲ್ಲಿ ಕುಳಿತಿದ್ದೀರಿ. ಇಲ್ಲಿ ತಮ್ಮ ಒಬ್ಬರ ಅಪ್ಪಣೆ ಬಿಟ್ಟು ಉಳಿದ ಯಾರೇ ಇರಲಿ, ಸರ್ಕಾರವಿರಲಿ, ಮುಖ್ಯಮಂತ್ರಿಗಳೇ ಇರಬಹುದು, ವಿರೋಧ ಪಕ್ಷದ ನಾಯಕರೇ ಇರಬಹುದು. ಅಥವಾ ಯಾರೇ ಇರಬಹುದು, ಬೇರೆ ಯಾವ ಅಪ್ಪಣೆಗೂ ನಾವು ತಲೆಬಾಗ ಬೇಕಾಗಿಲ್ಲ ತಾವು ನಮ್ಮ ರಕ್ಷಕರು, ಪ್ರಶ್ನೆ ಕೇಳುವ ಅಧಿಕಾರ ನಮಗೆ ಇದೆ. ನಮ್ಮ ಹಕ್ಕನ್ನು ರಕ್ಷಣೆ ಮಾಡಬೇಕಾದವರು ತಾವು. ಆಮೇಲೆ ತಾವು 'ಕೊಡಿ' ಎಂದು ಹೇಳಿದರೆ ಆ ಮಾತು ಬೇರೆ. ನಾವು ಅದನ್ನು ಪಾಲಿಸಲೇಬೇಕಾಗುತ್ತದೆ. ಇಲ್ಲಿ ಸರ್ಕಾರದವರು ಕಡ್ಡಾಯವಾಗಿ ಉತ್ತರ ಕೊಡಬೇಕಾಗುತ್ತದೆ ಇಲ್ಲದಿದ್ದರೆ ಅವರು ಅಪರಾಧ ಮಾಡಿದಹಾಗೆ ಆಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ರೂಲ್ಸ್ ಪುಸ್ತಕವನ್ನು ಓದಿದರೆ ಗೊತ್ತಾಗುತ್ತದೆ. Rule 334 says as follows :

"A member who wishes to bring to the notice of the House any matter which is not a point of order shall give notice to the Secretary in writing stating briefly the point on which he wishing to raise in the House together with reasons for wishing to raise it and he shall be permitted to raise it only after the Speaker has given his consent and at such time and date as the speaker may fix". ಎಂದು ಇದೆ. ಇದರ ಪ್ರಕಾರ ನೋಟೀಸ್‌ನ್ನು ಕಳಿಸಿದ್ದೇವೆ. ತಾರೀಖಿನ್ನೂ ಫಿಕ್ಸ್ ಮಾಡಿದ್ದೀರಿ, ಓದುವುದಕ್ಕೆ ಅವಕಾಶವನ್ನೂ ಕೊಟ್ಟಿದ್ದೀರಿ, ಅವಕಾಶವನ್ನು ಕೊಟ್ಟ ಮೇಲೆ ಅದು ಈ ಮನೆಯ ಸ್ವತ್ತು ಆಗುತ್ತದೆ. ಸರ್ಕಾರದವರು ಏನು ಹೇಳುತ್ತಾರೆ ಎಂದು ಎಲ್ಲರೂ ತಿಳಿದುಕೊಳ್ಳಬೇಕಾಗುತ್ತದೆ. ನಮ್ಮ ಪ್ರಶ್ನೆಗೆ ಉತ್ತರ ಕೊಡುವ ಜವಾಬ್ದಾರಿ ಸರ್ಕಾರದ್ದು. ಪ್ರಶ್ನೆ ಕೇಳುವುದು ನಮ್ಮ ಹಕ್ಕು. ಈ ಹಕ್ಕನ್ನು ಮೊಟಕು ಮಾಡುವ ರೀತಿಯಲ್ಲಿ ಮಾತನಾಡಿದರೆ, ಅವರು ಬೇಕಾದರೆ ಹೇಳಬಹುದು 'ನಾವು ಉತ್ತರವನ್ನು ಆಂಜೆ ಪಂಚಾಕ ಕಳಿಸಿಕೊಡುತ್ತೇವೆ' ಎಂದು, ಇದಕ್ಕೆ ಸಿಸಿಳನೇ ನಿಯಮವೇ ಬೇಕೆಂದೇನಿಲ್ಲ. ಯಾವಾಗ ಬೇಕಾದರೂ ಪ್ರಶ್ನೆ ಕೇಳಬಹುದು, ಅವರು ಯಾವಾಗ ಬೇಕಾದರೂ ಉತ್ತರ ಕೊಡಬಹುದು ಉತ್ತರವನ್ನು ಸದಸ್ಯರ ಮನೆಗೇ ಕಳಿಸಬಹುದು, ಇಲ್ಲವಾದರೆ ಅವರ ಮನೆಗೇ ಹೋಗಿ ನಾವು ಪ್ರಶ್ನೆ

ಯನ್ನು ಕೊಡಬಹುದು. ಆದರೆ ಈ ವಿಷಯದಲ್ಲಿ ಪ್ರಶ್ನೆ ಎತ್ತಿದಮೇಲೆ ಉತ್ತರವನ್ನೂ ಕೂಡ ಇಲ್ಲೇ ಹೇಳಬೇಕಾಗಿ ಬರುತ್ತದೆ. ಒಂದುವೇಳೆ ಉತ್ತರವನ್ನು ಇವೊತ್ತೇ ಕೊಡುವುದಕ್ಕೆ ಆಗದೇ ಹೋದರೆ ಮೂರು ದಿವಸ ಟೈಮ್ ಕೊಟ್ಟು ಮತ್ತೆ ಇಂಥ ವಿದ್ದೇ ದಿವಸ ಉತ್ತರ ಕೊಡಬೇಕೆಂದು ಹೇಳಿ. ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ಬಗ್ಗೆ ಚರ್ಚೆ ಆಗಿದೆ. ಈ ವಿಷಯದಲ್ಲೇ ಉತ್ತರ ಕೊಡುತ್ತೇವೆ ಎಂದು ಸ್ಪಷ್ಟವಾಗಿ ಅವರು ಹೇಳಿದ್ದಾರೆ. ಅವರು ಹೀಗೆ ಮಾಡದೇ ಇದ್ದರೆ, ಸದಸ್ಯರ ಹಕ್ಕುಗಳಿಗೆ ಚ್ಯುತಿ ಬರುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಮೇಲೆ ರೂಲಿಂಗ್ ಆಗಿದೆ. ಮಾನ್ಯ ಅಧ್ಯಕ್ಷರೇ, ತಮ್ಮ ಹಿಂದಿದ್ದವರು ಇದರ ಮೇಲೆ ರೂಲಿಂಗ್‌ನ್ನು ಹಿಂದೆ ಕೊಟ್ಟಿದ್ದಾಗಿ. ಇದರ ಮೇಲೆ ಚರ್ಚೆ ಮಾಡಕ್ಕಂಥಾದ್ದು ಏನೂ ಇಲ್ಲ. ಅದೇಪ್ರಕಾರ ಮಂತ್ರಿಗಳ ಗೈರುಹಾಜರಿಯಲ್ಲಿ ಉತ್ತರವನ್ನು ಒದಗಿಸಿ ಕೊಡುತ್ತೇನೆ ಎಂದು ಹೇಳಿದ್ದೇನೆ. ಇಲ್ಲೇ ಉತ್ತರ ಕೊಡುತ್ತೇವೆ ಎಂದು ನಾವು ಒಪ್ಪಿಕೊಂಡಿಲ್ಲ. ಬೇಕಾದರೆ ಪುನಃ ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದರ ಬಗ್ಗೆ ಪುನಃ ವಿಚಾರ ಮಾಡೋಣ.

ಶ್ರೀ ಆರ್. ವೆಂಕಟರಾವಯ್ಯ.—ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದು ಸಾಕಷ್ಟು ಚರ್ಚೆಯಾಗಿದೆ ದಿವಸಕ್ಕೆ ಹತ್ತು ಪ್ರಶ್ನೆಗಳನ್ನು ತೆಗೆದುಕೊಳ್ಳಬೇಕೆಂದೂ, ಸರ್ಕಾರ ಅದಕ್ಕೆ ಉತ್ತರ ಕೊಡಬೇಕೆಂದೂ ಆಗಿದೆ. ಮಾನ್ಯ ಸಚಿವರು ಮಾತನಾಡತಕ್ಕಂಥ ಧಾಟಿ ನೋಡಿದರೆ 'ಏನೋ ಕೊಟ್ಟರೆ ಕೊಡಬಹುದು, ಕೊಡದಿದ್ದರೆ ಏನು ? ಎನ್ನುವ ಅಭಿಪ್ರಾಯ ಬರುತ್ತದೆ. ಇಂತಹ ಉದಾಸೀನ ಪ್ರವೃತ್ತಿ ಸಲ್ಲದು. ಈ ಸದನದಲ್ಲಿ ಗಂಭೀರಕರವಾದ ಪರಿಸ್ಥಿತಿಗಳು ಯಾವಾಗ ಬೇಕಾದರೂ ಚರ್ಚೆಗೆ ಬರಬಹುದು. ಆದ್ದರಿಂದ ಸರ್ಕಾರದವರು ಉತ್ತರ ಕೊಡಲೇಬೇಕು.

ಶ್ರೀ ಮದನಗೋಪಾಲನಾಯಕ.—ನಿಯಮ ೩೩೪ರಲ್ಲಿ ಕೇಳಿರುವ ಪ್ರಶ್ನೆಗಳಿಗೆ 'ಉತ್ತರ ಒದಗಿಸಿ ಕೊಡುತ್ತೇವೆ. ಎಂದು ಸರ್ಕಾರದಿಂದ ಸಾಮಾನ್ಯವಾಗಿ ಆದೇಶ ಬಿಗುತ್ತದೆ. ೧೯೮೩ರಿಂದಲೂ ಇದನ್ನು ಕೇಳುತ್ತಲೇ ಬಂದಿದ್ದೇವೆ. ಮಾನ್ಯ ಮಂತ್ರಿಗಳು...

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ನಾವು ಇಲ್ಲಿ ತಮ್ಮ ಸಮಯ ತೆಗೆದುಕೊಂಡು ಪ್ರಶ್ನೆ ಕೇಳುವುದಾದರೂ ಏತಕ್ಕೆ ?...

(ಗೊಂದಲ)

ಇಲ್ಲಿ ಪ್ರಶ್ನೆ ಕೇಳತಕ್ಕಂಥ ಉದ್ದೇಶ ಏನೆಂದರೆ, ಉದಾಹರಣೆಗೆ ನಾವು ಈ ಮಂತ್ರಿಗಳು ಲಂಚಕೋರರು ಎಂದು ಹೇಳಿದರೆ, ಅವರು ಅದಕ್ಕೆ ಪ್ರತಿಯಾಗಿ ಏನು ಹೇಳುತ್ತಾರೆ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ತಾವು ಇಲ್ಲಿ ಜಡ್ಜ್ ಇದ್ದಹಾಗೆ. ತಾವು ಹೇಳಿದ ಹಾಗೆ ನಾವು ಕೇಳಬೇಕಾಗುತ್ತದೆ. ಮಾನ್ಯ ಲಕ್ಷ್ಮೀಸಾಗರ್ ಅವರು ತರುಣರಿದ್ದಾರೆ, ಅಧಿಕಾರದಲ್ಲಿದ್ದಾರೆ. ಅವರಿಗೆ ಉತ್ತರ ಕೊಡಲು ಏನು ತೊಂದರೆ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ. ಮಾನ್ಯ ಪಾಟೀಲರು ಲಕ್ಷ್ಮೀಸಾಗರ್ ಅವರನ್ನು 'ತರುಣರು' ಎಂದು ಹೇಳಿದ್ದಾರೆ. ಹೀಗೆ ಹೇಳುವ ಮುಂಚೆ ಅವರು ತಮಗೆ ನೋಟೀಸ್ ಕೊಡಬೇಕೆತ್ತೋ ಬೇಡವೊ ? ನೋಟೀಸ್ ಇಲ್ಲದೇ ಹೀಗೆ ಹೇಳಿಕೆಯನ್ನು ಅವರು ಕೊಟ್ಟಿದ್ದು ಸರಿಯಿಲ್ಲ. ಅವರನ್ನೇ ತರುಣರು ಎಂದರೆ ನಮ್ಮ ಗತಿಯೇನು ?

ಶ್ರೀ ಕೆ. ಎಚ್. ಪಾಟೀಲ್.—ತಮಗೆ ಗೊತ್ತಿದೆ, ಎಲ್ಲಿಯವರೆಗೆ ಲಗ್ನವಾಗಿರುವುದಿಲ್ಲ, ಬ್ರಹ್ಮಚಾರಿಗಳಾಗಿರುತ್ತಾರೆ, ಅಲ್ಲಿಯವರೆಗೂ ಅವರನ್ನು ತರುಣರು ಎಂದು ಹೇಳುತ್ತಾರೆ. ಅದಕ್ಕಾಗಿ ನಾನು ಆರೀತಿ ಹೇಳಿದೆ. ಈ ಬಗ್ಗೆ ಶ್ರೀಮಾನ್ ವೈಕುಂಠ ಬಾಳಿಗಾರವರು ರೂಲಿಂಗ್‌ನ್ನು ಕೊಟ್ಟಿದಾರೆ, ಅದನ್ನು ಸರ್ಕಾರ ಅನುಸರಿಸುತ್ತದೆಯೇ ? ಪ್ರಶ್ನೋತ್ತರ ನಡೆಯುವಂತಹ ಸಮಯದಲ್ಲಿ ಸದಸ್ಯರು ಸ್ಥಳವನ್ನು ಬಿಟ್ಟು ಹೋಗಬಾರದು ಎಂದು ರೂಲಿಂಗನ್ನು ಇನ್ನೊಂದು ಕಡೆ ಕೊಟ್ಟಿದ್ದಾರೆ, ಅವುಗಳೆಲ್ಲವನ್ನೂ ಪಾಲಿಸುವುಕ್ಕಾಗುತ್ತದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಶ್ರೀನಿವಾಸ್‌ರವರು ಬಹಳ ಆಕ್ಷೇಪಕಾರಿಯಾದ ಪಾಯಿಂಟ್‌ನ್ನು ಎತ್ತಿದ್ದಾರೆ. ಶ್ರೀಮಾನ್ ಕೆ. ಎಚ್. ಪಾಟೀಲ್‌ರವರು ನನ್ನನ್ನು ಮುದುಕ ಎಂದು ಹೇಳಿದರೂ ತೊಂದರೆ ಏನೂ ಇಲ್ಲ.

ಶ್ರೀ ವೇದಾಂತ ಹೆಬ್ಬಿಗೆ.—ಶ್ರೀಮಾನ್ ಲಕ್ಷ್ಮೀಸಾಗರ್ ರವರು ತರುಣರೂ ಅಲ್ಲ, ಮುದುಕರೂ ಅಲ್ಲ. ಅವರು ಬ್ರಹ್ಮಚಾರಿಗಳು.

ಶ್ರೀ ಎಸ್. ಬಂಗಾರಪ್ಪ.— ತಾಳಿ ಭಾಗ್ಯ ಯೋಜನೆಯಲ್ಲಿ ಅವರಿಗೊಂದು ತಾಳಿಯನ್ನು ಕಳುಹಿಸಿ ಕೊಟ್ಟುಬಿಡಿ. ದಿವಸವೂ ಅವರ ವಿಚಾರವನ್ನೇ ಮಾತನಾಡುವುದೇ ಆಗಿದೆ.

ಶ್ರೀ ಕೆ. ಎಚ್. ಪಾಟೀಲ್.—ಸ್ನೇಹ ಪರವಾಗಿ ಅರೀತಿ ಹೇಳಿದ್ದುದು. ನಾನು ಸರ್ಕಾರದಲ್ಲಿ ಪುನಃ ಹೇಳುವುದೇನೆಂದರೆ. ಮಾನ್ಯ ಬಂಗಾರಪ್ಪನವರು. ಮಾನ್ಯ ಬಂಗಾರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದು, ಅವರಿಗೆ ಮಂತ್ರಿಗಳ ಮಟ್ಟದಲ್ಲಿ ಅಧಿಕಾರ ಇರುವುದರಿಂದ ಅವರು ನೇರವಾಗಿ ಸಂಬಂಧಪಟ್ಟವರಿಗೆ ಪತ್ರಗಳನ್ನು ಬರೆದು ಉತ್ತರವನ್ನು ತರಿಸಬಹುದು. ಸದನದಲ್ಲಿ ಅವರು ಕೇಳ ಬೇಕಾದ ಆಗತ್ಯ ಇರುವುದಿಲ್ಲ. ನಾನೂ ಕೂಡ ಶಾಸಕನಾಗಿದ್ದೇನೆ. ನೇರವಾಗಿ ಇಲಾಖೆಯ ಮುಖ್ಯ ಸ್ಥರಿಗೆ ಬರೆದು. ಹಾಗೂ ಕಾರ್ಯದರ್ಶಿಯವರಿಗೆ ಬರೆದು ಅನೇಕ ಸಂದರ್ಭದಲ್ಲಿ ಉತ್ತರಗಳನ್ನು ತರಿಸ ಬಹುದು. ಅವರು ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ನಾವು ಇಲ್ಲಿ ಪ್ರಶ್ನೆಗಳನ್ನು ಎತ್ತುವಂತಹ ಉದ್ದೇಶವಾದರೂ ಏನೆಂದರೆ, ಮಾನ್ಯ ಮಂತ್ರಿಗಳು ಸಾಧ್ಯವಾದಷ್ಟು ದಿಂದ ಉತ್ತರವನ್ನು ತಿಳಿಸುತ್ತಾರೆ ಎಂದು. ಮಂತ್ರಿಗಳು ಹೇಳುವಂತಹ ಉತ್ತರಗಳು ಸರಿಬರದಿದ್ದರೆ ಇಲ್ಲಿಯೇ ಅದನ್ನು ಹೇಳಬೇಕಾಗುತ್ತದೆ. ಆಗ ಪರಸ್ಪರವಾದ ವಿವಾದ ನಡೆದು ಸ್ವಲ್ಪವಂಟ್ಟಿನ ಘರ್ಷಣೆ ನಡೆಯುತ್ತದೆ. ಈ ಮಧ್ಯದಲ್ಲಿ ಉತ್ತಮವಾದ ಸಂಗತಿ ಹೊರಬರುತ್ತದೆ. ತಾವು ರೂಲ್ಸನ್ನು ಓದ ಬೇಕು ಎಂದು ಏಕೆ ಹೇಳುತ್ತಿದ್ದೀರಿ ? ವಿಷಯಗಳನ್ನು ನಿಮ್ಮ ಗಮನಕ್ಕೆ ತರಬೇಕು ಎಂದು ಇದೆ. ಆ ಧಾಟಿಯಲ್ಲಿ ಮಾತನಾಡಿದರೆ ನಿಮ್ಮ ಕಿವಿ ಹಿಂಡಿದ ಹಾಗೆ ಆಗುತ್ತದೆ. ನಿಮಗೆ ಅಧಿಕಾರ ಇದೆ. ಅಧಿಕಾರಿಗಳು ಇದ್ದಾರೆ, ನಮಗೆ ಏನೂ ಇಲ್ಲ ನಮಗೆ ಮಾಹಿತಿ ಬೇಕಾಗಿದೆ. ಯಾರಾದರೊಬ್ಬರ ಹತ್ತಿರ ದುಡ್ಡು ತೆಗೆದುಕೊಂಡ ಎಂದರೆ ದುಡ್ಡು ಕೊಟ್ಟವನು ಓಡಿ ಬಂದು ಹೇಳುತ್ತಾನೆ, ಹೀಗೆ ಮಾಡುತ್ತಾರೆ, ಎಂದು, ಅವನು ಇಲ್ಲಿಗೆ ಬಂದು ಹೇಳುವುದಕ್ಕಾಗುತ್ತದೆಯೇ ? ನಮ್ಮ ಗಮನಕ್ಕೆ ಅವನ್ನು ತರುತ್ತಾನೆ. ನಾವು ಸದನದ ಮುಖಾಂತರ ನಿಮ್ಮ ಗಮನಕ್ಕೆ ತರುತ್ತೇವೆ. ಆದಕ್ಕೆ ನದನದಲ್ಲಿ ಉತ್ತರ ಹೇಳಬೇಕಾಗುತ್ತದೆ.

ಶ್ರೀ ಜೆ. ಎಚ್. ಪಟೇಲ್.—ಇದರ ಬಗ್ಗೆ ಚರ್ಚೆ ಬೇಡ. ತಾವೇ ಸಲಹೆ ಮಾಡಿದ ಹಾಗೆ ಇದನ್ನು ಸಭಾ ಸಲಹಾ ಮಂಡಲಿಯಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡೋಣ. ನಾನು ಏನು ಹೇಳುತ್ತಿದ್ದೇನೆಂದರೆ, ಕೆಲವನ್ನು ಗಮನ ಸೆಳೆಯುವ ಮೂಲಕ ಸಭೆಯಗಮನಕ್ಕೆ ತರುವಂತಹ ವಿಷಯರಳು ಇರುತ್ತವೆ. ಕೆಲವು ಪ್ರಶ್ನೆಗಳ ಮೂಲಕ ತರುವಂತಹ ವಿಷಯಗಳು ಇರುತ್ತವೆ. ಎಂತಹ ಪ್ರಶ್ನೆಯನ್ನು ಕೇಳಿದರೂ ನಾವು ಅದಕ್ಕೆ ಉತ್ತರ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವು ವುಕ್ಕಾಗುವುದಿಲ್ಲ. ಇಂತಹ ಗಹನವಾದ ಹಲವಾರು ಪ್ರಶ್ನೆಗಳು ಇವೆ. ವಿಷಯ ಬೇಕು ಆಷ್ಟೆ. ಯಾವುದಾದರೊಂದು ವಿಷಯವನ್ನು ಸದನದ ಗವರ್ನಕ್ಕೆ ತರುವುದು, ಅದಕ್ಕೆ ಸರ್ಕಾರ ಉತ್ತರ ಕೊಡತಕ್ಕಂತಹದ್ದು, ಅಥವಾ ಅದರ ಮೇಲೆ ಚರ್ಚೆಮಾಡಬಹುದಾದ ವಿಷಯಗಳೂ ಇರಬಹುದು. ಎಕ್ಸ್ಟ್ರಾರ್ಡಿನರಿ ಪ್ರಾವಿಜನ್ ಇಟ್ಟಿರತಕ್ಕಂತಹದ್ದು, ಯಾವುದಾದರೊಂದು ಅಂತಹ ಅತಿಮಾಮ್ಯವಾದ ವಿಷಯ ಇದ್ದರೆ ಅದನ್ನು ಸದನದ ಗಮನಕ್ಕೆ ತರುವುದಕ್ಕಾಗಿ. ಆದರೆ ಅದನ್ನೇ ಪ್ರತಿ ದಿನದ ರೂಲ್ ಆಗಿ ಮಾಡಿಕೊಂಡರೆ ಬಹಳ ಕಷ್ಟವಾಗುತ್ತದೆ. ಬೆಳಗ್ಗೆ ೧೧ ಗಂಟೆಗೆ ನೋಟೀಸ್ ಬಂದಿದ್ದು, ಎನ್. ಜಿ.ಇ.ಎಫ್.ನಲ್ಲಿ ಇಂತಹ ಒಂದು ಘಟನೆಯಾಗಿದೆ ಎಂಬುದಾಗಿ ಇಲ್ಲಿಗೆ ಬಂದ ಮೇಲೆ ಮಂತ್ರಿಗಳಿಗೆ ಗೊತ್ತಾಗುತ್ತದೆ. ಆದರೆ ಆದರ ಬಗ್ಗೆ ಇಲ್ಲಿಯೇ ಉತ್ತರವನ್ನು ಹೇಳುವುದಾದರೂ ಹೇಗೆ ? ನಾವು ಬ್ರಹ್ಮರಲ್ಲ. ಸಾಮಾನ್ಯ ಮನುಷ್ಯರು, ಹಿಂದೆ ಏನು ನಡೆದಿದೆ, ಮುಂದೆ ಏನು ನಡೆಯಬಹುದು ಎಂಬುದು ನನಗೆ ಗೊತ್ತಾಗುವುದಿಲ್ಲ ಈ ಬಗ್ಗೆ ನಿಯಮವೆಂದು ಪ್ರತಿ ದಿವಸವೂ ಹೋಗುವುದು ಬೇಡ. ಮಾನ್ಯ ಸದಸ್ಯರ ಆಮೂಲ್ಯವಾದ ಸಮಯ ಕೂಡ ಹೋಗುತ್ತದೆ. ಈ ಬಗ್ಗೆ ಸಭಾ ಸಲಹಾ ಸಮಿತಿಯನ್ನು ತಾವು ಕರೆದು ತಕ್ಷಣವೇ ತೀರ್ಮಾನ ತೆಗೆದುಕೊಳ್ಳಿ.

ಶ್ರೀ ಯು. ಭೂಪತಿ.—ಕೆಲವು ವಿಷಯಕ್ಕೆ ಉತ್ತರ ಗೊತ್ತಿದ್ದರೂ ಕೂಡ ನುಣಚಿಕೊಳ್ಳ ತಕ್ಕಂತಹ ವಾತಾವರಣವನ್ನು ನಾವು ಇವೊತ್ತು ಕಂಡಿದ್ದೇನೆ.

ಅಧ್ಯಕ್ಷರು.—ಇಷ್ಟು ಚರ್ಚೆ ಸಾಕು. ಏನಾದರೂ ವ್ಯವಸ್ಥೆ ಮಾಡುತ್ತೇನೆ ಸಭಾ ಸಲಹಾ ಸಮಿತಿಯಲ್ಲಿ ಇನ್ನೊಮ್ಮೆ ಕುಳಿತುಕೊಂಡು ವಿಶೇಷವಾಗಿ ಏನಾದರೂ ತೀರ್ಮಾನ ಮಾಡೋಣ.

ಏಕೆಂದರೆ ಇದಕ್ಕೆ ರೂಲ್ಸ್ ಇಲ್ಲ. ಆದಕ್ಕೆ ಯಾವ ರೀತಿ ಮಾಡಬಹುದು ಎಂಬುದನ್ನು ಚರ್ಚೆ ಮಾಡಿ ಎರಡೂ ಕಡೆಯವರು ಒಪ್ಪುವ ರೀತಿಯಲ್ಲಿ ಒಂದು ತೀರ್ಮಾನ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಈ ನಿಯಮಾವಳಿ ಸರಿ ಇಲ್ಲ. ಇದರ ಪ್ರಕಾರ ಸರ್ಕಾರಕ್ಕೆ ಹೆಚ್ಚು ಒತ್ತಡ ಆಗುತ್ತದೆ. ಆದಕ್ಕೆ ಸರ್ಕಾರದಿಂದ ಹೇಳಿಕೆಯನ್ನು ಪಡೆಯತಕ್ಕಂತಹದ್ದಕ್ಕೆ ಸಾಧ್ಯವಾಗುವುದಿಲ್ಲ ಎಂಬ ಕಾರಣಕ್ಕಾಗಿ ಒಂದು ಒಳ್ಳೆಯ ಸಂಪ್ರದಾಯವನ್ನು ಸೃಷ್ಟಿ ಮಾಡಿದ್ದೇವೆಂದು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಹೇಳಿದ ಹಾಗೆ ಸುಮಾರು ೨೦ ರಿಂದ ೪೦ ರವರೆಗೆ ಈ ನೋಟೀಸ್‌ಗಳು ಆ ರೀತಿ ಇರತಕ್ಕಂತಹ ಸದಸ್ಯರಿಂದ ಆದೇ ರೀತಿ ಈ ಕಡೆ ಇರತಕ್ಕಂತಹ ಸದಸ್ಯರಿಂದ ಬರುತ್ತಿರತಕ್ಕಂತಹ ಪ್ರಸಂಗಗಳು ಇದ್ದವು. ಆಗ ನಾವು ಆ ರೀತಿ ಕೊಡತಕ್ಕಂತಹ ನೋಟೀಸ್‌ಗಳನ್ನು ೧೦ಕ್ಕೇ ರಿಪ್ಲೈಕ್ಟ್ ಮಾಡಿದ್ದಕ್ಕೆ ಕಾರಣ ಏನು ? ಇದು ಬಹಳ ಮುಂಖ್ಯವಾದ ವಿಚಾರ. ೧೦ಕ್ಕೆ ಮಾತ್ರ ರಿಪ್ಲೈಕ್ಟ್ ಮಾಡಿದ್ದು ಎಂದರೆ ಪ್ರಶ್ನೆ ಕೇಳಿದಂತಹ ಮಾನ್ಯ ಸದಸ್ಯರಿಗೆ ಸರ್ಕಾರದಿಂದ ಉತ್ತರ ಸಿಗಲೆಂದು. ಆದರೆ ಈಗ ಸರ್ಕಾರದ ಮಂತ್ರಿಗಳು ನೀಡಿರುವ ಉತ್ತರದ ರೀತಿ ಇವುಗಳನ್ನು ೧೦ಕ್ಕೆ ರಿಪ್ಲೈಕ್ಟ್ ಮಾಡತಕ್ಕ ಪ್ರಶ್ನೆ ಉದ್ಭವಾಗುತ್ತಿರಲಿಲ್ಲ. ಆವರು ಸಭೆಯಲ್ಲಿ ಹೇಳಿಕೆ ಕೊಡುವುದಿಲ್ಲ ಎಂದು ಹೇಳುವುದಾದರೆ ೩೫೦ರ ವಿಷಯಗಳನ್ನು ೧೦ಕ್ಕೆ ನಿಲ್ಲಿಸಬೇಕಾದ ಪ್ರಶ್ನೆ ಬರುತ್ತಿರಲಿಲ್ಲ. ನಾವೇ ನಮಗೆ ಇರತಕ್ಕಂತಹ ಹಕ್ಕನ್ನು ಕರ್ಟೈಲ್ ಮಾಡಿಕೊಳ್ಳಬೇಕಾದಂತಹ ಪಮೇಯ ಬರುತ್ತಿರಲಿಲ್ಲ. ಪ್ರಶ್ನೆ ಮೂಲಕ ಸದಸ್ಯರು ಉತ್ತರವನ್ನು ಬಯಸುತ್ತಾರೆ, ಬೇರೆ ರೀತಿಯಲ್ಲಿ ಉತ್ತರವನ್ನು ಬಯಸಬಹುದು ಎಂದು ನೀವು ಹೇಳುವುದಾದರೆ, ೩೫೦ನೇ ನಿಯಮ ಏಕೆ ಇರಬೇಕು ? ೧೦ಕ್ಕೇ ಏಕೆ ರಿಪ್ಲೈಕ್ಟ್ ಮಾಡಿದ್ದು ಎಂದರೆ, ನೀವು ಹೇಳಿಕೆ ಕೊಡತಕ್ಕಂತಹ ದೃಷ್ಟಿಯಿಂದ ನಾವು ೩೫೦ರ ವಿಷಯಗಳನ್ನು ೧೦ಕ್ಕೆ ಒಪ್ಪಿಕೊಂಡಿದ್ದುದು ಅದೂ ತಾತ್ಕಾಲಿಕವಾಗಿ, ಮುಂದೆ ಅಂತಿಮ ತೀರ್ಪು ತಮ್ಮಿಂದ ಬರುವವರೆಗೂ ಎಲ್ಲರೂ ಸೇರಿ ಒಪ್ಪಿಕೊಂಡಿದ್ದೇವೆ. ಆದರೆ ಮಾನ್ಯ ಸಚಿವರು ಹೇಳಿದ ರೀತಿಯಲ್ಲಿ ಉತ್ತರವನ್ನು ನಮಗೆ ಕಳುಹಿಸಿಕೊಡುತ್ತೇವೆಂಬ ಪದವನ್ನು ಹೇಳಿದ್ದರಿಂದ ನಾವು ಪುನಃ ಈ ರೀತಿ ಕೇಳಬೇಕಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ಸದನದಲ್ಲೇ ಉತ್ತರವನ್ನು ಒದಗಿಸಿಕೊಡುತ್ತೇವೆಂದು ಹೇಳಿಲ್ಲ. ಸಭೆಯು ಪ್ರಾರಂಭವಾದ ಸಮಯದಿಂದ ಇಲ್ಲಿ ಉತ್ತರ ಕೊಡಬೇಕಾದ ನಿರ್ದಿಷ್ಟವಾದ ಪ್ರಸಂಗಗಳಲ್ಲಿ ಕೊಟ್ಟಿದ್ದೇವೆ. ಮಿಕ್ಕವುಗಳಿಗೆಲ್ಲಾ ಉತ್ತರವನ್ನು ಒದಗಿಸಿಕೊಡುತ್ತೇವೆಂದು ಹೇಳಿ, ಮಾನ್ಯ ಸದಸ್ಯರಿಗೆಲ್ಲಾ ಆ ರೀತಿ ಒದಗಿಸುತ್ತಾ ಬಂದಿದ್ದೇವೆ.

ಅಧ್ಯಕ್ಷರು.—ಆ ರೀತಿ ಆದರಲ್ಲಿ ಇಲ್ಲ. ಸಭಾ ಸಲಹಾ ಸಮಿತಿಯನ್ನು ಕರೆದು ಇದನ್ನು ಚರ್ಚೆ ಮಾಡಿ ತೀರ್ಮಾನ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ನಾವು ತಮ್ಮನ್ನು ಪ್ರಶ್ನೆ ಮಾಡಬೇಕಾಗುತ್ತದೆ, ಸದನದಲ್ಲಿ ಆ ರೀತಿ ಹೇಳಿಲ್ಲ ಎನ್ನುವ ಅರ್ಥ ಬರುವ ರೀತಿಯಲ್ಲಿ ವಿಚಾರವನ್ನು ಅವರು ಹೇಳುವುದಾದರೆ ೧೦ಕ್ಕೇ ಏಕೆ ರಿಪ್ಲೈಕ್ಟ್ ಮಾಡಿದ್ದೀರಿ ಎಂಬುದನ್ನು ನಾವು ನಿಮ್ಮನ್ನು ಪ್ರಶ್ನೆ ಮಾಡಬೇಕಾಗುತ್ತದೆ. ೫೦೦ ನೋಟೀಸ್ ಬಂದರೂ ಬರಲಿ. ಉತ್ತರ ಒದಗಿಸ ತ್ತಾರೋ ಅಥವಾ ಇಲ್ಲವೋ ನೋಡ ಬಹುದಿತ್ತು, ತಾವು ಈ ರೀತಿ ಉತ್ತರವನ್ನು ಕೊಡುವುದಕ್ಕೆ ಏಕೆ ಅವಕಾಶ ಕೊಡುತ್ತೀರಿ ?

ಶ್ರೀ ಎಂ. ಎಸ್. ಕೃಷ್ಣನ್.—ತಮಗೆ ಗೊತ್ತಿದ್ದ ಹಾಗೆ ಇವುಗಳನ್ನು ೫ಕ್ಕೇ ರಿಪ್ಲೈಕ್ಟ್ ಮಾಡಬೇಕೆಂಬ ಸಲಹೆ ಕೂಡಆಗ ಬಂತು, ಮಾನ್ಯ ಮುಖ್ಯಮಂತ್ರಿಗಳು ೫ಕ್ಕೇ ರಿಪ್ಲೈಕ್ಟ್ ಮಾಡಬೇಕು ಎಂದು ಹೇಳಿದರು. ಅಲ್ಲದೆ ೧೫-೨೦ ನಿಮಿಷದಲ್ಲಿ ಚರ್ಚೆ ಮಾಡಿ ಅವುಗಳಿಗೆ ಉತ್ತರವನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ ಎಂಬ ಸಲಹೆಯನ್ನೂ ಕೂಡ ಅವರು ಕೊಟ್ಟರು. ಹಾಗೆಂದರೆ ಉತ್ತರವನ್ನು ಈ ಮನೆಯಲ್ಲೇ ಕೊಡಬೇಕೆಂಬ ಅರ್ಥವಾಗುವುದಿಲ್ಲವೇ ? ಆಗ ಮತ್ತೆ ನಾವೆಲ್ಲರೂ ಚರ್ಚೆ ಮಾಡಿದಾಗ ೫ ರಿಂದ ೧೦ಕ್ಕೇ ರಿಪ್ಲೈಕ್ಟ್ ಮಾಡಬೇಕು ಎಂದು ಹೇಳಿದಾಗ ಏಷ್ಟು ಸಮಯ ಬೇಕಾಗುತ್ತದೆ ಎಂಬ ಪ್ರಶ್ನೆಯೂ ಬಂತು. ಇದು ೨೫ ನಿಮಿಷದಲ್ಲಿ ಮುಗಿಯಬೇಕೆಂದೂ ಕೂಡ ಆಯಿತು. ಆಗ ಕೊನೆಗೆ ಅರ್ಧ ಗಂಟೆಯೊಳಗೆ ಇವುಗಳನ್ನು ಮುಗಿಸಬಹುದು. ಅಂದ ಮೇಲೆ ಆ ೧೦ಕ್ಕೂ ಈ ಮನೆಯಲ್ಲೇ ಉತ್ತರ ಕೊಡಬೇಕಲ್ಲವೇ ? ಆದರೆ ಈಗ ಒದಗಿಸಿಕೊಡುತ್ತೇವೆ ಎಂಬುದಾಗಿ ಹೇಳುವುದು ತರವಾದ ಮಾತಲ್ಲ.

ಶ್ರೀ ಎಸ್. ಬಂಗಾರಪ್ಪ.—ಆದ್ದರಿಂದ ತಾವು ಸರ್ಕಾರಕ್ಕೆ ಸರಿಯಾದ ಆದೇಶವನ್ನು ಕೊಡಬೇಕು. ಉಳಿದಂತಹ ಮಾನ್ಯ ಸದಸ್ಯರ ಹಕ್ಕನ್ನು ಇದರಿಂದ ಕರ್ಟೈಲ್ ಮಾಡಿದಂತಾಗುವುದಿಲ್ಲವೇ ? ನಮ್ಮ ಸೌಜನ್ಯವನ್ನು ಈ ರೀತಿ ದುರುಪಯೋಗಪಡಿಸಿಕೊಂಡು ಸರ್ಕಾರ ಹೋಗುವುದಾದರೆ, ಇದನ್ನು ನಾವೂ ಕೂಡ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ, ಅವರು ಹೇಳಿಕೆಯನ್ನು ಈ ಬಗ್ಗೆ ಕೊಡಲೇಬೇಕು. ಕಾನೂನಿನಲ್ಲಿ ಆ ರೀತಿ ಇಲ್ಲ ಎಂದು ಹೇಳುವುದಾದರೆ ಉಳಿದಿರಕ್ಕ ಮಾನ್ಯ ಸದಸ್ಯರ ಹಕ್ಕನ್ನು ಮೊಟುಕು ಗೊಳಿಸಿದ ಹಾಗೆ ಆಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ರೂಲ್ಸ್ ಪ್ರಕಾರ ಹೋಗುವುದಾದರೆ.....

ಶ್ರೀ ಎಸ್: ಬಂಗಾರಪ್ಪ:—ರೂಲ್ಸ್ ಪ್ರಕಾರವೇ ಹೋಗೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ರೂಲ್ಸ್ ಪ್ರಕಾರ ತಿಳಿಗರ ಕೆಳಗೆ ವಿಚಾರ ಬಂದಾಗ ಲೋಕ ಸಭೆಯಲ್ಲಿ ಏನು ಮಾಡುತ್ತಾರೆಂದರೆ, ದಿವಸಕ್ಕೆ ೨೦೦ ನೋಟೀಸ್ ಕೂಡಬರಬಹುದು ಅವುಗಳೊಳಗೆ ಉತ್ತಮವಾದ ಕೆಲಸಕ್ಕಾಗಿ ಬಂದವುಗಳೆಲ್ಲಾ ಎಷ್ಟೋ ಹೋಗುತ್ತವೆ. ಅವರು ಅಲ್ಲಿ ಏನು ಮಾಡುತ್ತಾರೆಂದರೆ ಲಾಟರಿ ಎತ್ತುತ್ತಾರೆ. ಬಂದಂತಹವುಗಳನ್ನೂ ಮಾತ್ರ ಅಲೋ ಮಾಡುತ್ತಾರೆ. ಆಗಲೂ ಕೂಡ ಅವುಗಳನ್ನು ವಿಶದವಾಗಿ ಹೇಳುವುದಕ್ಕೂ ಬಿಡುವುದಿಲ್ಲ. ಆ ಮೇಲೆ ಸಲಹೆ ಬಂತು, ಲಾಟರಿ ಹಾಕಿದಾಗ ಅತಿ ಮಹತ್ವವಾದ ಎಷ್ಟೋ ವಿಚಾರಗಳು ಸಭೆಯ ಗಮನಕ್ಕೆ ಬಾರದೆ ಹೋಗಬಹುದು. ಅದನ್ನು ತಮ್ಮ ಡಿಸ್‌ಕ್ರಿಷನರಿಗೆ ಬಿಟ್ಟುಬಿಡಬೇಕು ಎಂದು ತೀರ್ಮಾನವಾಯಿತು.

ಇದನ್ನು ಚರ್ಚೆ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ನಿಯಮಾವಳಿ ಪ್ರಕಾರ ಚರ್ಚೆ ಮಾಡೋಣ. ಮಾನ್ಯ ಲಕ್ಷ್ಮೀಸಾಗರ್‌ರವರು ಉತ್ತರವನ್ನು ಕಳಿಸಿಕೊಡುತ್ತೇನೆ, ಒಪ್ಪಿಸಿಕೊಡುತ್ತೇನೆಂದು ಹೇಳಿದರೆ ಹೇಗೆ ? ಅದು ಅನಂತರದ ತೀರ್ಮಾನ. ನಾವು ಹತ್ತಕ್ಕೆ ಒಪ್ಪಿಗೆ ಕೊಟ್ಟು ತಪ್ಪು ಮಾಡಿದ್ದೇವೆಂದು ನೀವು ಹೇಳುವುದಾದರೆ. ಹತ್ತು ಈಗಿನಿಂದಲೇ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಈ ವಿಚಾರವನ್ನು ಚರ್ಚೆಗೆ ಎತ್ತಿದ್ದರಿಂದ, ನಾವು ಇದನ್ನು ಎತ್ತಬೇಕಾಗಿದೆ. ಸಲಹಾ ಸಮಿತಿಯಲ್ಲಿ ಇದನ್ನು ಚರ್ಚೆ ಮಾಡಬಹುದು. ಕೆಲವು ಪ್ರಶ್ನೆಗಳು ಏಕಾಏಕಿ ಚರ್ಚೆಗೆ ಬರುತ್ತವೆ. ಪಾರ್ಲಿಮೆಂಟಿನಲ್ಲಿ ಸದನದ ಕಾರ್ಯಕಲಾಪಗಳು ನಡೆಯುತ್ತಿದೆ. ಇದನ್ನು ಅಲ್ಲಿ ಯಾವಾಗ ಉಪಯೋಗ ಮಾಡುತ್ತಾರೆ. ಅದು ಬೇರೆ ಪ್ರಶ್ನೆ. ಶೂನ್ಯ ವೇಳೆಯ ಬದಲು ತಿಳಿಗರ ನಿಯಮ ಇದೆ. ಈ ಸದನದಲ್ಲಿ ಕೆಲವು ಪರಂಪರೆಗಳು ನಡೆದುಕೊಂಡು ಬಂದಿವೆ. ಜೀರೋ ಅವರ್ ಅನ್ನು ರಿವೈಸ್ ಮಾಡಬೇಕೆಂದು ನಾವೂ ಒತ್ತಾಯ ಮಾಡುತ್ತಿದ್ದೇವೆ. ಆದರ ಬಗ್ಗೆ ಪ್ರತ್ಯೇಕವಾಗಿ ಮಾತನಾಡೋಣ. ಕ್ರಮ ಬದ್ಧವಾಗಿ ಒಂದು ವಿಚಾರವನ್ನು ಇಲ್ಲಿ ಎತ್ತಲಿಕ್ಕೆ ರೂಲ್ ತಿಳಿಗರ ಅನ್ನು ಉಪಯೋಗ ಮಾಡಿಕೊಂಡಿದ್ದೇವೆ. It is a some sort of extension of a point of order. ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಒಂದು ವಿಚಾರವನ್ನು ಎತ್ತಿದ್ದಾಗ, ಅದಕ್ಕೆ ಉತ್ತರ ಬಂದದ್ದೂ ಉಂಟು. ಪಾಯಿಂಟಿವಾಗಿ ಎತ್ತುವ ಬದಲು ಲಿಖಿತ ಮೂಲಕ ಎತ್ತಬೇಕೆಂದಿದೆ. ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಚರ್ಚೆಗೆ ಎಷ್ಟು ಅವಕಾಶವಿದೆ, ಅಷ್ಟೇ ಅವಕಾಶವು ರೂಲ್ ತಿಳಿಗರ ರಲ್ಲಿ ಇದೆ. ಆದರೆ ಅದನ್ನು ಉಪಯೋಗ ಮಾಡುತ್ತಿಲ್ಲ. We are bound by certain discipline. ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಅದಕ್ಕಾಗಿ ನಾನು ಪ್ರಸ್ತಾಪ ಮಾಡಿದೆ ಹೆಸನ್ನು ಬೇಕಾದರೆ ಹಾಕಿ, ಆದರೆ, ಅದರ ಬಗ್ಗೆ ಚರ್ಚೆಯಾಗಬೇಕು. ಮತ್ತು ಸ್ಪಷ್ಟೀಕರಣ ಕೇಳುವುದಕ್ಕೆ ಅವಕಾಶ ಇರಬೇಕು ಎಂದು. ಈ ವೇಳೆಯಲ್ಲಿ ಸದಸ್ಯರು ಎತ್ತಿದ ಪ್ರಾಮುಖ್ಯವಾದ ವಿಷಯಗಳು ಇಡೀ ಸದನದಲ್ಲಿ ಪ್ರಮುಖ ಪಾತ್ರವನ್ನು ಪೂಷಿದಂತಹ ಪ್ರಕರಣ ಹಿಂದೆ ನಡೆದಿದೆ. ಚರ್ಚೆಗೆ ಸ್ಪಷ್ಟ ಸ್ವರೂಪವನ್ನು ಕೊಡದೇ ಇರತಕ್ಕಂತಹ ಸಂದರ್ಭ ತಿಳಿಗರಲ್ಲಿ ಬರದೇ ಇದ್ದರೆ, ಇದರ ಉದ್ದೇಶ ಸಂಪೂರ್ಣವಾಗಿ ನಾಶವಾಗುತ್ತದೆ, ಅದರ ಪಾವಿತ್ರ್ಯತೆಗೆ ಭಂಗ ತರಬಾರದು. ೧೦ ಪ್ರಶ್ನೆಗಳೇ ಇರಲೀ, ಅದನ್ನು ಪ್ರಸ್ತಾಪ ಮಾಡಿದಾಗ, ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ಅಲ್ಲಿಗೇ ನಿಲ್ಲಿಸಿಬಿಡೋಣವೆಂದು ಹೇಳಿದರೆ, ಅದು ಸರಿಯಾದುದಲ್ಲ. Sir, I think, you will have to pull up the Treasury Benches. They are grossly violating the decisions of the Business Advisory Committee ತಿಳಿಗರ ನಿಯಮದಲ್ಲಿ ಎತ್ತಿದಂತಹ ಪ್ರಶ್ನೆಗೆ, ಸರ್ಕಾರ ಉತ್ತರ ಕೊಡದೇ ಇರತಕ್ಕಂತಹ ಸಂದರ್ಭ ಬಂದಾಗ, ಅದರ ಉದ್ದೇಶ ಸಂಪೂರ್ಣವಾಗಿ ನಾಶವಾಗುತ್ತದೆ. ಆದುದರಿಂದ ಇದನ್ನು ಕೂಲಂಕಷವಾಗಿ ಚರ್ಚೆ ಮಾಡಬೇಕು. ಇದನ್ನು ಇಷ್ಟಕ್ಕೆ ನಿಲ್ಲಿಸಬೇಕೆಂದು

ಹೇಳುವುದಾದರೆ, ಹೇಗೆ ? ಆ ದಿವಸ ನಾವು ಅದಕ್ಕೆ ಒಪ್ಪಿಗೆ ಕೊಟ್ಟಿದ್ದೇವೆ, It should not become a subject matter of discussion again and again.

ಶ್ರೀ ಎಸ್. ಬಂಗಾರಪ್ಪ.—ಈ ರೀತಿ ಹೇಳುವುದು ಉದ್ಧಟತನದ ಪರಮಾವಧಿ.

(INTERRUPTION)

MR. SPEAKER.—Let us have a healthy procedure.

ಶ್ರೀ ಎಂ. ವೀರಪ್ಪಮೊಯಿಲಿ.—ಉತ್ತರ ತತಕ್ಷಣ ಸಿದ್ಧ ಇರದೇ ಇದ್ದರೆ, ಅದನ್ನು ಸಂಜೆ ಒಳಗೆ ಅಥವಾ ನಾಳೆ ಕೊಡುತ್ತೇವೆಂದು ಹೇಳುವಂತಹ ಸೌಜನ್ಯತೆ ತೋರಿಸದೇ ಇದ್ದರೆ, ಬಿಜಿನೆಸ್ ಅಡ್ವೈಜರಿ ಕಮಿಟಿಗೆ ನಾವು ಬರುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಉತ್ತರ ಕೊಡುವುದಿಲ್ಲವೆಂದು ಯಾರೂ ಹೇಳಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಬಿಜಿನೆಸ್ ಅಡ್ವೈಜರಿ ಕಮಿಟಿಗೆ ನಾವು ಬರಬೇಕೂ, ಅದರಲ್ಲಿ ಭಾಗವಹಿಸಬೇಕೆಂದು ಹೇಳುವುದಾದರೆ ದಯವಿಟ್ಟು ಈ ಬಗ್ಗೆ ಮಾನ್ಯ ಮಂತ್ರಿಗಳಿಗೆ ಎಚ್ಚರಿಕೆ ಕೊಡಬೇಕು. ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನು ನಿರ್ಣಯ ಆಗುತ್ತದೆ, ಅದರ ಪಾವಿತ್ರ್ಯತೆಗೆ ಯಾರೂ ಭಂಗ ತರಬಾರದು. ಆ ವಿಷಯ ಇಲ್ಲಿ ಚರ್ಚೆಯ ವಸ್ತು ಆಗಬಾರದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಬಿರುಸಾದ ಶಬ್ದಗಳನ್ನು ಉಪಯೋಗಿಸಿ ಸರ್ಕಾರ ಏನೋ ಮಹಾ ತಪ್ಪು ಮಾಡಿದೆಯೆಂದು ಹೇಳಿದ್ದಾರೆ. ಸರ್ಕಾರ ಅಂತಹ ತಪ್ಪನ್ನೇನೂ ಮಾಡಿಲ್ಲ ಸರ್ಕಾರವನ್ನು ಪುಲಪ್ ಮಾಡಬೇಕು ಎಂದು ಹೇಳಿದ್ದಾರೆ. ಅದನ್ನು ಇಲ್ಲಿ ಯಾರೂ ಮಾಡಿಲ್ಲ. ಬಿಜಿನೆಸ್ ಅಡ್ವೈಜರಿ ಕಮಿಟಿಗೆ ಬರುವುದಿಲ್ಲ, ಬಾಯ್‌ಕಾಟ್ ಮಾಡುತ್ತೇವೆಂದು ಹೇಳುವುದಾದರೆ ಮಾಡಿ.

(ಗೊಂದಲ)

ಈ ರೀತಿ ತಾವು ಬೆದರಿಕೆ ಹಾಕಬೇಡಿ. ಹೀಗೆ ಬೆದರಿಕೆ ಹಾಕುವುದಕ್ಕಾಗುವುದಿಲ್ಲ. ಹಾಗೆ ಹಾಕುವುದಾದರೆ ಹೇಗೆ ? ಬಾಯ್‌ಕಾಟ್ ಮಾಡುತ್ತೇವೆಂದು ಹೇಳುತ್ತಾರೆ. ಇದು ಹಂಡುಗಾಟಿಕೆ ಆಯಿತು.

ಅಧ್ಯಕ್ಷರು.—ಬೊಮ್ಮಾಯಿಯವರೇ, ಸ್ವಲ್ಪ ಶಾಂತರಾಗಿ.

ಶ್ರೀ ಕೆ. ಹೆಚ್. ಪಾಟೀಲ್.—ಅವರು ಇದು ಹಂಡುಗಾಟಿಕೆಯಾಯಿತೆಂದು ಹೇಳುತ್ತಿದ್ದಾರೆ. ಇದು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ.—ಈ ರೀತಿ ಹೇಳುವುದಾದರೆ, ನಾವು ಬರುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬಿಜಿನೆಸ್ ಅಡ್ವೈಜರಿ ಕಮಿಟಿಗೆ ನಾವು ಬರುವುದಿಲ್ಲ ಬಾಯ್‌ಕಾಟ್ ಮಾಡಬೇಕೆಂದು ಹೇಳಿ ಕೊಡುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ಲಕ್ಷ್ಮೀಸಾಗರರವರೆ, ಇವೊತ್ತು ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಏನು ತೀರ್ಮಾನವಾಗಿದೆ ಎಂಬುದನ್ನು ಹೇಳಿ. ಆವೊತ್ತು ರೂಲ್ ೩೩ಕ್ಕೆ ಉತ್ತರ ಕೊಡಬೇಕೆಂದು ಆಯಿತು. ರೂಲ್ ೩೩ಕ್ಕೆ ಮೇರೆಗೆ ಎರಡೂ ಕಡೆಯವರೂ ನೋಟೀಸ್ ಕೊಡುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ಕೊಡುವುದಿಲ್ಲವೆಂದು ನಾನು ಹೇಳಲಿಲ್ಲ. ಈ ಸಭೆ ಪ್ರಾರಂಭವಾದ ದಿನದಿಂದಲೂ ಮಂತ್ರಿಗಳು ಈ ಸದನದಲ್ಲಿದ್ದಾಗ ೩೩ಕ್ಕೆ ಪ್ರಶ್ನೆಗೆ ಬಾಯಿ ಮಾತಿನಲ್ಲಿಉತ್ತರವನ್ನು ಒದಗಿಸಿ ಕೊಟ್ಟಿದ್ದಾರೆ. ಮಂತ್ರಿಗಳು ಇಲ್ಲದೇ ಇರತಕ್ಕಂತಹ ಸಂದರ್ಭದಲ್ಲಿ ನಾನು ಅವರ ಪರವಾಗಿ, ಅವರಿಗೆ ಉತ್ತರ ಒದಗಿಸುತ್ತೇನೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದೇನೆ. ನಂತರ ಆ ಪ್ರಶ್ನೆಯನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಕಳಿಸಿಕೊಟ್ಟು, ಆ ವಿಚಾರದಲ್ಲಿ ಉತ್ತರವನ್ನು ಒದಗಿಸಿಕೊಡತಕ್ಕಂತಹ ಕೆಲಸವನ್ನು ಪ್ರಾರಂಭದಿಂದಲೂ ಮಾಡಿಕೊಂಡು ಬಂದಿದ್ದೇವೆ. ಇವೊತ್ತು ಕೂಡ ಮಾನ್ಯ ಬಂಗಾರಪ್ಪನವರು ಪ್ರಶ್ನೆ ಕೇಳುವುದಕ್ಕೆ ಮೊದಲು ಇದೇ ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಮಂತ್ರಿಗಳ ಗೈರಂ

ಹಾಜರಿಯಲ್ಲಿ ನನ್ನ ಹತ್ತಿರ ಉತ್ತರವಿಲ್ಲ, ನಂತರ ಒದಗಿಸಿಕೊಡುತ್ತೇನೆಂದು ಹೇಳಿದ್ದೇನೆ. ಉತ್ತರ ಕೊಡುವುದಿಲ್ಲವೆಂದು ನಾನು ಹೇಳಲಿಲ್ಲ.

ಒಬ್ಬ ಸದಸ್ಯರು.—ಯಾವಾಗ ಕೊಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ನಿಯಮ ೩೩ರ ಪ್ರಶ್ನೆಗೆ ಉತ್ತರ ಕೊಡಬೇಕೆಂದು ತೀರ್ಮಾನವಾಗಿದೆ. ಉತ್ತರವನ್ನು ಇಲ್ಲಿಯೇ ಒದಗಿಸಿಕೊಡುವ ಬಗ್ಗೆ ತೀರ್ಮಾನವಾಗಿಲ್ಲ. ಉತ್ತರ ಒದಗಿಸಿ ಕೊಡತಕ್ಕಂತಹ ಜವಾಬ್ದಾರಿ ನಮಗೆ ಇದೆ, ಸರ್ಕಾರಕ್ಕೂ ಇದೆ. ಅದನ್ನು ಇಲ್ಲಿಯವರೆಗೆ ಮಾಡಿಕೊಂಡು ಬಂದಿದ್ದೇವೆ. ತಪ್ಪು ಏನಾದರೂ ಆಗಿದ್ದರೆ, ಅದನ್ನು ಸರಿಪಡಿಸಿಕೊಳ್ಳುತ್ತೇನೆ. ನೀವು ೩೩ರ ನಿಯಮದ ಮೇರೆಗೆ ಪ್ರಶ್ನೆಯನ್ನು ಇಲ್ಲಿಯೇ ಕೇಳಬೇಕು ಅದಕ್ಕೆ ನಾವು ಇಲ್ಲಿಯೇ ಉತ್ತರ ಒದಗಿಸಬೇಕೆಂದು ನಾವು ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಒಪ್ಪಿಕೊಂಡಿಲ್ಲ.

ಆದುದರಿಂದ ನೀವು ಪ್ರಶ್ನೆ ೩೩ರಲ್ಲಿ ಬರುವ ವಿಚಾರಗಳನ್ನು ಇಲ್ಲಿಯೇ ಕೇಳಬೇಕು. ಉತ್ತರವನ್ನು ಇಲ್ಲಿಯೇ ಒದಗಿಸಬೇಕು. ಇದರ ಮೇಲೆ ಚರ್ಚೆ, ಇತ್ಯಾದಿಗಳಿಗೆ ನಾವು ಒಪ್ಪಿಕೊಂಡಿಲ್ಲ. ರೂಲ್‌ನಲ್ಲಿ ಇದಕ್ಕೆ ಅವಕಾಶವೂ ಇಲ್ಲ. ಆದುದರಿಂದ ನಾನು ತಮ್ಮಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಇದರ ಬಗ್ಗೆ ಬಿಸಿನೆಸ್ ಅಡ್ವೈಸರಿ ಸಮಿತಿಯ ಸಭೆಯನ್ನು ತಾವು ಕರೆಯಿರಿ, ಅಲ್ಲಿ ಕೇಳಿತುಕೊಂಡು ವಿಚಾರ ವಿನಿಮಯ ಮಾಡಿದ ನಂತರ ಯಾವ ರೀತಿ ನಡೆದುಕೊಳ್ಳಬೇಕು ಎನ್ನುವ ಬಗ್ಗೆ ಉಭಯತ್ರರೂ ತೀರ್ಮಾನ ತೆಗೆದುಕೊಳ್ಳೋಣ. ಇಲ್ಲಿಯವರೆಗೆ ಸಾಕಷ್ಟು ಚರ್ಚೆಯಾಯಿತು. ಇನ್ನು ಮುಂದೆ ಚರ್ಚೆ ಇಲ್ಲಿ ಬೇಡವೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಇವೊತ್ತು ಸಾಯಂಕಾಲ ಆರು ಗಂಟೆಗೆ ಬಿಸಿನೆಸ್ ಅಡ್ವೈಸರಿ ಸಮಿತಿಯ ಸಭೆಯನ್ನು ಕರೆದು ಅಲ್ಲಿ ಇದನ್ನು ವಿಚಾರ ಮಾಡೋಣ.

ಶ್ರೀ ಜಿ. ಎಸ್. ಶಿವನಂಜಪ್ಪ.—ತಾವು ಒಂದು ಆದೇಶವನ್ನು ಕೊಟ್ಟಿದ್ದೀರಿ. ಬಿಸಿನೆಸ್ ಅಡ್ವೈಸರಿ ಸಮಿತಿಯಲ್ಲಿ ಇದು ತೀರ್ಮಾನವಾಗಿದ್ದು ಆದರ ಪ್ರಕಾರ ಮಂತ್ರಿಗಳು ಉತ್ತರವನ್ನು ಇಲ್ಲಿಯೇ ಕೊಡಬೇಕು. ಆದರೆ ಇವರು ಇಲ್ಲವೆಂದು ಹೇಳುತ್ತಾರೆ. ತಿರುಗಿ ತಾವು ಇನ್ನೊಂದು ಕಡೆ ಮಾತನಾಡೋಣವೆಂದು ಹೇಳಿದರೆ ಹೇಗಾಗುತ್ತದೆ ? ೩೩ರಲ್ಲಿ ಎಲ್ಲಿ ಉತ್ತರ ಕೊಡಬೇಕು ? ಉತ್ತರ ಕೇಳಬೇಕಾದುದು ಇಲ್ಲಿಯೇ?

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ನಾಳೆ ಸಾಯಂಕಾಲ ಆರು ಗಂಟೆಗೆ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ಇದನ್ನು ವಿಚಾರ ಮಾಡೋಣ.

ಶ್ರೀ ಜಿ.ಎಸ್. ಶಿವನಂಜಪ್ಪ.—ಪೋಸ್ಟ್ ಮೂಲಕ ಉತ್ತರ ಕೇಳಬೇಕಾದರೆ ನಾವು ಇಲ್ಲಿ ಏತಕ್ಕೆ ಕುಳಿತುಕೊಳ್ಳಬೇಕು ?

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಎಲ್ಲರ ಅನುಕೂಲಕ್ಕೋಸ್ಕರ ಏನು ಮಾಡುವುದು ಎಂದು ನಂತರ ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ತಮ್ಮಲ್ಲಿ ಒಂದು ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಕೃಷ್ಣನ್‌ರವರೇ, ನಾಳೆ ಆರು ಗಂಟೆಗೆ ಮಾತನಾಡೋಣ. ಉತ್ತರ ಕೊಡಬೇಕೆಂದು ನಿರ್ಣಯವಾಗಿದೆ, ಆದರೆ ಇವೊತ್ತು ಉತ್ತರ ಕೊಡಬೇಕೋ, ನಾಳೆ ಕೊಡಬೇಕೋ, ನಾಡಿದ್ದು ಕೊಡಬೇಕೋ, ಎನ್ನುವ ಬಗ್ಗೆ ನಿರ್ಣಯ ಆಗಿಲ್ಲ ಅಷ್ಟೆ.

ಶ್ರೀ ಎಂ ಎಸ್. ಕೃಷ್ಣನ್.—ಈಗ ಇಲ್ಲಿರುವ ಪ್ರಶ್ನೆ, ಉತ್ತರವನ್ನು ಇವೊತ್ತು ಕೊಡಬೇಕೇ, ನಾಳೆ ಕೊಡಬೇಕೆ ಎನ್ನುವುದಲ್ಲ. ಇಲ್ಲಿ ಉದ್ಭವಿಸಿರುವ ಪ್ರಶ್ನೆ ಉತ್ತರವನ್ನು ಇಲ್ಲಿ ಕೊಡಬೇಕೇ ? ಅಥವಾ ನೇರವಾಗಿ ಮಾನ್ಯ ಬಂಗಾರಪ್ಪನವರಿಗೆ ಕೊಡಬೇಕೇ ? ಎನ್ನುವುದು. ಇದರಲ್ಲಿ ನಾನು ಹೇಳುವುದೇನೆಂದರೆ, ನಮ್ಮ ಅಂಡರ್‌ಸ್ಟ್ಯಾಂಡಿಂಗ್ ಪ್ರಕಾರ, ಉತ್ತರವನ್ನು ಸಭೆಯಲ್ಲಿ ಕೊಟ್ಟರೆ ಒಳ್ಳೆಯದು ಎಂದು. ಆದರೆ ಅವರು ಹೇಳುತ್ತಾರೆ ಇಲ್ಲ ಎಂದು. ನನಗನ್ನಿಸುತ್ತದೆ ಇದನ್ನು ದೊಡ್ಡ ಒಂದು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡುವುದು ಬೇಡ. ಏಕೆಂದರೆ ಇಲ್ಲಿಯತನಕದ ವಾದ ಹೇಗೆಂದರೆ ಉತ್ತರವನ್ನು ಇಲ್ಲಿ ಕೊಡಬೇಕೆ ? ಅಲ್ಲಿ ಕೊಡಬೇಕೇ ಎನ್ನುವುದು ಮಾತ್ರ ಇದೆ. ಮಾನ್ಯ

ಬೊಮ್ಮಾಯಿಯವರು ಎತ್ತಿರುವ ಪ್ರಶ್ನೆಯನ್ನು ನೋಡಿದರೆ, ಅವರು ಆ ರೀತಿಯಲ್ಲಿ ಮಾತನಾಡಿದರೆ ನಮಗೆ ಕಷ್ಟ ಬಂದು ಬಿಡುತ್ತದೆ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಈಗ ನಾವು ಏನು ಮಾಡಬೇಕೆಂದು ಸಲಹೆ ಕೊಡಿ. ಈ ವಿಷಯದಲ್ಲಿ ಬಹಳ ಹೊತ್ತಿನವರೆಗೆ ಇಲ್ಲಿ ಚರ್ಚೆಯಾಗಿದೆ. ನಾನು ಈಗಾಗಲೇ ನಿಮಗೆ ಹೇಳಿದ್ದೇನೆ. ನಾಳೆ ಆರು ಗಂಟೆಗೆ ಬಿಸಿನೆಸ್ ಅಡ್ವೈಸರಿ ಸಮಿತಿಯ ಸಭೆಯನ್ನು ಕರೆಯೋಣ, ಆಗ ನಿರ್ದಿಷ್ಟವಾಗಿ ಏನು ಮಾಡಬೇಕೆಂದು ತೀರ್ಮಾನಕ್ಕೆ ಬರೋಣ.

ಶ್ರೀ ಎಂ. ಎಸ್. ಕೃಷ್ಣನ್.—ನಿರ್ದಿಷ್ಟವಾಗಿ ಆಮೇಲೆ ಬೇಕಾದರೆ ಮಾಡೋಣ. ಮಾನ್ಯ ಲಕ್ಷ್ಮೀಸಾಗರ್‌ರವರಲ್ಲಿ ನಾನು ಕೇಳುವುದೇನೆಂದರೆ, ಮಾನ್ಯ ಒಂಗಾರಪ್ಪನವರು ಎತ್ತಿರುವ ವಿಷಯದ ಬಗ್ಗೆ ಇಂತಹ ದಿವಸ ಹೇಳಿಕೆ ಕೊಡುತ್ತೇನೆ ಎಂದು ಅವರು ಹೇಳಲಿ. ಅವರು ಯಾವತ್ತು ಬೇಕಾದರೂ ಉತ್ತರ ಕೊಡಲಿ. ಇನ್ನು ಮಿಕ್ಕಿದ ವಿಷಯ ಏನಿದೆ, ಎಂದರೆ ಅಲ್ಲಿಯೇ, ಉತ್ತರ ಕೊಡಬೇಕೇ, ಅಥವಾ ಇಲ್ಲಿಯೇ ಹೇಳಿಕೆಯನ್ನು ಕೊಡಬೇಕೇ, ಬರೀ ಹೇಳಿಕೆಯನ್ನು ಕೊಡಬೇಕೆ ? ಎನ್ನುವುದನ್ನು ಬೇಕಾದರೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಚರ್ಚೆ ಮಾಡೋಣ. ಈ ಒಂದು ಸಲಹೆಯನ್ನು ಒಪ್ಪಿ ಕೊಂಡರೆ ಒಳ್ಳೆಯದಾಗಿರುತ್ತಿತ್ತು. ಇಲ್ಲದೇ ಹೋದರೆ ಉಗುರಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದು ಕೊಂಡು ಹೋದ ಹಾಗೆ ಆಗುತ್ತದೆ. ಅಂತಹದನ್ನು ಏಕೆ ಮಾಡಬೇಕು? ಇದನ್ನು ಪ್ರತಿಷ್ಠೆಯ ಮಾತನ್ನಾಗಿ ಈಗ ಅವರು ಮಾಡುವುದು ಬೇಡ ಎಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ.—ಮಾನ್ಯ ಅಧ್ಯಕ್ಷರೇ, ಪ್ರಾರಂಭದಲ್ಲಿ ಮಾನ್ಯ ಸಚಿವ ರಾದಂತಹ ಜೆ.ಎಚ್. ಪಟೇಲ್‌ರವರು, ಮದುವೆ ಆದ ನಂತರ ಮಗು, ಮಗು ಆದ ನಂತರ ಮದುವೆ ಎಂದು ವಿಚಾರವನ್ನು ಹೇಳಿದ್ದರು. ಈಗ ನಾನು ಹೇಳುತ್ತಾ ಇದ್ದೇನೆ. ಮದುವೇನೂ ಆಗಿದೆ, ಆದರೆ ಅದನ್ನು ಸಾಕುವ ಜವಾಬ್ದಾರಿ ಬಂದಾಗ ತಕರಾರು ಏಕೆ ಮಾಡುತ್ತಾ ಇದ್ದೀರಿ ? ಎಂಬ ಪ್ರಶ್ನೆಗೆ ಉತ್ತರ ಬೇಕಾಗಿದೆ.

(ನಗು)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಲಕ್ಷ್ಮೀಸಾಗರ್‌ರವರು ಈಗ ತಾನೇ ಹೇಳಿರತಕ್ಕಂತಹ ಅಂಡರ್‌ಸ್ಟ್ಯಾಂಡಿಂಗ್ ಎಂದರೆ, ಪ್ರಶ್ನೆಗಳನ್ನು ನಿಯಮ ೩೫ರ ಪ್ರಕಾರ ಎತ್ತಿದ ಮೇಲೆ. ನಾವು ಹೇಳಿಕೆಗಳನ್ನು ಕೊಡುತ್ತಾ ಬಂದಿದ್ದೇವೆ ಎನ್ನತಕ್ಕಂತಹ ಅಭಿಪ್ರಾಯವನ್ನು ಹೇಳಿ, ಅದರ ಪ್ರಕಾರ ಮಾತನಾಡಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಉತ್ತರ ಕಳುಹಿಸುವ ವ್ಯವಸ್ಥೆಯನ್ನು ಮಾಡುತ್ತೇನೆಂದರಿ ಹೇಳಿದ್ದೇನೆ. ಯಾರಿಗಾದರೂ ಉತ್ತರ ಹೋಗದಿದ್ದರೆ, ಅವರಿಗೆ ಉತ್ತರ ಕಳುಹಿಸುವ ಜವಾಬ್ದಾರಿ ತೆಗೆದುಕೊಳ್ಳುತ್ತೇನೆಂದು ಹೋದಸಾರಿಯೂ ಹೇಳಿದ್ದೇನೆ, ಇಪ್ಪೊತ್ತೂ ಹೇಳಿದ್ದೇನೆ. ಆದರ ಮೇಲೆ ನಾನು ಹೇಳದೆ ಇರುವುದನ್ನು ತಾವು ಹೇಳಿದರೆ ತೊಂದರೆಯಾಗುತ್ತದೆ ಅಷ್ಟೆ.

ಅಧ್ಯಕ್ಷರು.—ನಾಳೆ ಇದನ್ನು ಮಾತನಾಡೋಣ. ಆಗ ಇಷ್ಟೇ ದಿವಸಗಳಲ್ಲಿ ಉತ್ತರ ಕೊಡಬೇಕೆಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಜೊತೆಗೆ ನಾವು ಈಗ ತಾವು ಕರೆದ ಸಭೆಗೆ ಬರಬೇಕೋ ಬೇಡವೇ ಎಂದು ವಿಚಾರ ಮಾಡಬೇಕಾಗಿದೆ. ಏಕೆಂದರೆ ಈಗಿನ ಬೆಳವಣಿಗೆ ನೋಡಿದರೆ ಹಾಗೆ ಕಾಣುತ್ತದೆ. ಆದರ ಬಗ್ಗೆ ನಾವು ತೀರ್ಮಾನ ಮಾಡುತ್ತೇವೆ. ಸರಕಾರದ ವಿಚಾರದಲ್ಲಿ ನಾವು ಇನ್ನು ಆ ಸಭೆಗೆ ಏತಕ್ಕೆ ಹೋಗಬೇಕೆನ್ನುವ ಅಭಿಪ್ರಾಯವೂ ಇದೆ ಎಂದು ಕಾಣುತ್ತದೆ. ಈಗ ಅದರ ಬಗ್ಗೆ ಅಂತಿಮವಾದ ತೀರ್ಮಾನವನ್ನು ನಾವು ತೆಗೆದುಕೊಳ್ಳುವುದಿಲ್ಲ. ಮಾರ್ಚ್‌ನಲ್ಲಿ ಚುನಾವಣೆ ಆದಮೇಲೆ, ಸೇರಿರತಕ್ಕಂತಹ ಒಂದು ಅಧಿವೇಶನದಲ್ಲಿ ಸಂಬಂಧಪಟ್ಟ ಕೆಲವು ಸಚಿವರ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದಾಗಅವರ ಪರವಾಗಿ ಹೇಳಿಕೆಯನ್ನು ಕೊಡುತ್ತೇನೆ;ವಿಚಾರದ ಬಗ್ಗೆತಿಳಿಸುತ್ತೇನೆಎನ್ನುವಮಾತನ್ನು ಹೇಳಿದ್ದರು. ಸಭೆ ನಡೆಯುವ ಸಂದರ್ಭದಲ್ಲಿ ಹೇಳಿಕೆಯನ್ನು ಕೊಡಿಸಂತ್ತಾರೆ ಎನ್ನುವ ಆಸೆಯಿಂದಲೂ ಮಾನ್ಯ ಸದಸ್ಯರು ಇದರ ಪ್ರಸ್ತಾಪ ಮಾಡಿದರು. ಸುಮಾರು ಎಷ್ಟು ಹೇಳಿಕೆಗಳನ್ನು ಕೊಟ್ಟಿದ್ದಾರೆ, ಎಷ್ಟು ಹೇಳಿಕೆಗಳನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ ? ಉಳಿದಿರತಕ್ಕಂತಹವುಕ್ಕೆ ಸದನ ಮುಗಿದ ಮೇಲೆ,

ಉತ್ತರವನ್ನು ಕಳುಹಿಸಿ ಕೊಡತಕ್ಕಂತಹ ವಿಷಯದಲ್ಲಿ ಕೂಡಾ ಅವರು ಮಾತನಾಡಿದ್ದಾರೆ. ಇಲ್ಲಿ ಏನು ಅಭಿಪ್ರಾಯ ಬರುತ್ತದೆ ಎಂದರೆ, ಎಷ್ಟು ಹೇಳಿಕೆಗಳನ್ನು ಕೊಟ್ಟಿದ್ದಾರೆ, ಅವುಗಳನ್ನು ಬಿಟ್ಟು ಹೇಳಿಕೆ ಕೊಡುವುದಕ್ಕೆ ಎಷ್ಟು ಸಾಧ್ಯವಾಗಿಲ್ಲ ಅವುಗಳಿಗೆಲ್ಲ ಉತ್ತರವನ್ನು ಮಾನ್ಯ ಸದಸ್ಯರುಗಳಿಗೆ ಕಳುಹಿಸಿ ಕೊಟ್ಟಿದ್ದೇನೆ ಎನ್ನತಕ್ಕಂತಹದ್ದು. ನಾನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ, ದಯವಿಟ್ಟು ತಾವು ಅಷ್ಟೂ ಅಂಕಿಸಂಖ್ಯೆಗಳನ್ನು ತೆಗೆದುಕೊಳ್ಳ ಬೇಕು. ಹೇಳಿಕೆಗಳನ್ನು ಎಷ್ಟು ಕೊಟ್ಟಿದ್ದಾರೆ, ಅಷ್ಟು ಬಿಟ್ಟು ಎಷ್ಟಕ್ಕೆ ಅವರಿಂ ಸದಸ್ಯರಿಗೆ ಉತ್ತರವನ್ನು ಕಳುಹಿಸಿಕೊಟ್ಟಿಲ್ಲ ಎನ್ನುವುದು ತಿಳಿಯುತ್ತದೆ. ಅನೇಕ ವಿಷಯಂಗಳು ಪ್ರಸ್ತಾಪವಾಗಿರತಕ್ಕಂತಹವುಗಳಿಗೆ ಕೂಡಾ ಉತ್ತರವನ್ನು ಕಳುಹಿಸಿಕೊಟ್ಟಿಲ್ಲ. ಹಾಗಾದರೆ ನಾವು ಇಲ್ಲಿ ಏತಕ್ಕೆ ಪ್ರಾಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡಬೇಕೆನ್ನುವ ಪ್ರಶ್ನೆಯೂ ಬರುತ್ತದೆ. ಉತ್ತರವನ್ನ ಇಲ್ಲಿಗೆ ಕಳುಹಿಸಿ ಕೊಟ್ಟುದುದನ್ನು ನಾವು ನೋಡುವುದಿಲ್ಲ. ಆ ಪ್ರಶ್ನೆಗೆ ಉತ್ತರ ಬರುವುದು ಸದನ ಮುಂಗಿದ ಮೇಲೆ, ಸದನ ನಡೆಯುತ್ತಿರ ಬೇಕಾದರೆ, ಪೋಸ್ಟ್‌ನಲ್ಲಿ ತರಿಸಿಕೊಳ್ಳ ಬೇಕಾದ ಅವಶ್ಯಕತೆ ಇಲ್ಲಿ ನಮಗಿಲ್ಲ. ನೀವೂ ಕೂಡಾ ಮಂತ್ರಿಗಳಾಗಿ ಇಲ್ಲಿ ಬಂದು ಕುಳಿತುಕೊಂಡು ಹೇಳ ಬೇಕಾದ ಅವಶ್ಯಕತೆಯೂ ಇಲ್ಲ. ಪೋಸ್ಟ್‌ನಲ್ಲಿ ಬೇಕಾದರೆ ನಾವು ಪ್ರಶ್ನೆಗಳನ್ನು ಕೇಳ ಬಹುದು, ನೀವು ಕಳುಹಿಸಿ ಕೊಡಲೂ ಬಹುದು. ಆದರೆ ಸದನ ಸೇರಿದ ಮೇಲೆ, ಸದನದ ಮುಂದೆ ಪ್ರಸ್ತಾಪವಾದ ಮೇಲೆ, ಅದು ಈ ಸದನದ ಸ್ವತ್ತು ಆಗುತ್ತದೆ. ಆದಕ್ಕೆ ನೀವು ಹೇಳಿಕೆಗಳನ್ನು ಕೊಡತಕ್ಕಂಥಾದ್ದು ಎಂದಾಯಿತು. ನಿಯಮಾವಳಿಯ ಪ್ರಕಾರ ನಾವು ನಿಮಗೆ ಒತ್ತಡ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂತಹ ಪ್ರಶ್ನೆಯನ್ನು ನೀವು ಇಟ್ಟರೂ ಕೂಡಾ ನಾವು ಬಂದಿರುವ ತೀರ್ಮಾನಕ್ಕೆ ಬದ್ಧರಾಗಿ ಇದ್ದಮೇಲೆ, ಈ ವಿಚಾರದಲ್ಲಿ ನೀವು ಇಲ್ಲಿ ಉತ್ತರ ಕೊಡಲೇ ಬೇಕು ಎನ್ನತಕ್ಕಂಥಾದ್ದು ಇಲ್ಲ ನಾನು ಬೇಕಾದರೆ ಕೊಡಬಹುದು ಇಲ್ಲವಾದರೆ ಇಲ್ಲ ಎನ್ನತಕ್ಕ ಒಂದು ಮಟ್ಟಕ್ಕೆ ನೀವು ಹೋದರೆ. ಆಗ ಅಧ್ಯಕ್ಷರಿಗೇ ನಾವು ಏನು ಮಾಡಬೇಕೆನ್ನುವ ಅಧಿಕಾರವನ್ನು ಕೊಟ್ಟಿದ್ದೇವೆ. ಪಾರ್ಲಿಮೆಂಟ್‌ನಲ್ಲಿ ಲಾಟ್ ಎತ್ತುತ್ತಾರೆ , ಎನ್ನುವ ಮಾತನ್ನು ಮಾನ್ಯ ಬೊಮ್ಮಾಯಿಯವರು ಹೇಳಿದ್ದಾರೆ. ನಾವು ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿದ್ದೇವೆ. ಮಾನ್ಯ ಸಭಾಧ್ಯಕ್ಷರಿಗೆ ಅದರ ಬಗ್ಗೆ ಅಧಿಕಾರವನ್ನು ಕೊಟ್ಟಿದ್ದೇವೆ. ತಮ್ಮಲ್ಲಿ ಅಪಾರದವಾದ ನಂಬಿಕೆಯನ್ನು ನಾವು ಎರಡೂ ಪಕ್ಷದವರೂ ಇಟ್ಟು ನಿಮಗೆ ಅಧಿಕಾರವನ್ನು ಕೊಟ್ಟಮೇಲೆ, ತಾವು ತೀರ್ಪನ್ನು ಕೊಟ್ಟಮೇಲೆ, ನಾವು ತಲೆಬಾಗಿಸಿ ಇದುವರೆಗೂ ಕೂಡಾ ಒಪ್ಪಿಕೊಂಡು ಬಂದಿದ್ದೇವೆ. Though we are lossing our right too much, ಇಷ್ಟಾದರೂ ಕೂಡಾ ಇದು ಮುಂದಿನ ಅಂತಿಮ ತೀರ್ಮಾನ ಆಗುವವರೆಗೆ ತಾವು ನಮಗೆ ಉತ್ತರ ಬೇಕಾದರೆ ಕಳುಹಿಸಿಕೊಡಬಹುದು. ಇಲ್ಲಿಯೇ ಹೇಳಿಕೆ ಕೊಡಬೇಕೆನ್ನುವ ಅವಶ್ಯಕತೆ ಇಲ್ಲ ಎನ್ನತಕ್ಕಂತಹ ಅಭಿಪ್ರಾಯಕ್ಕೆ ಬಂದರೆ ಹೇಗೆ ಆಗುತ್ತದೆ. ?

ಅಧ್ಯಕ್ಷರು.—ಉತ್ತರ ಕೊಡಬೇಕೆಂದು ಆಗಿದೆ. ಆದು ಯಾವಾಗ, ಇವೊತ್ತೋ, ಮರು ದಿವಸವೋ ಎಂಬುದು ತೀರ್ಮಾನ ಆಗಬೇಕಾಗಿದೆ. ಅವರೂ ಇದನ್ನು ಒಪ್ಪಿಕೊಳ್ಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಇಲ್ಲವಲ್ಲ, ಅವರು ಒಪ್ಪಿಲ್ಲ. ಬೇಕಾದರೆ ತಾವು ಕಳುಹಿಸಿಕೊಡ ಬಹುದೆಂದು ಹೇಳಿದ್ದಾರೆ.

ಅಧ್ಯಕ್ಷರು.—ಉತ್ತರ ಕೊಡುತ್ತೇವೆಂದು ಅವರು ಒಪ್ಪಿಕೊಂಡಿದ್ದಾರೆ. ಈಗಲೂ ಒಪ್ಪಿ ಕೊಳ್ಳುತ್ತಾರೆ.

ಶ್ರೀ ಜೆ. ಎಚ್. ಪಟೀಲ್.—ಅಧ್ಯಕ್ಷರೇ, ವಿರೋಧಪಕ್ಷದ ನಾಯಕರು ಕೇಳುತ್ತಿರುವ ಪ್ರಶ್ನೇ ವಿತ್ತೆ ಪುನಃ ಪುನಃ ಚರ್ಚೆ ಮಾಡುವುದು ಬೇಡ. ಉತ್ತರ ಕೊಡುವುದು ಎಂದು ಬಿಸಿನೆಸ್ ಅಡ್ವೈಸರಿ ಸಮಿತಿಯಲ್ಲಿ ತೀರ್ಮಾನ ಮಾಡಿ, ಇಷ್ಟೆ ಪ್ರಶ್ನೆಗಳು ಇರಬೇಕೆಂದೂ ತೀರ್ಮಾನ ಮಾಡಿದ್ದೇವೆ. ತಾವೂ ಹೇಳಿದ್ದೀರಿ, ಮಾನ್ಯ ವಿರೋಧಪಕ್ಷದ ನಾಯಕರೂ ಹೇಳಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಅಧ್ಯಕ್ಷರೇ ಹೊರಗೆ ಉತ್ತರ ಕೊಟ್ಟಿದ್ದಾರೆಂದು ಆಗುತ್ತದೆ.

ಶ್ರೀ ಜೆ. ಎಚ್. ಪಟೀಲ್.—ಇಲ್ಲಿಯೇ ಉತ್ತರ ಕೊಡಬೇಕೆಂದರೆ ಸ್ವಲ್ಪ ಕಷ್ಟ ಬರುತ್ತದೆ. ಅವಕ್ಕೆಲ್ಲಾ ಕೆಲವು ಕಾನೂನುಗಳು ಇವೆ. ಅಸ್ಯೂರೆನ್ಸ್ ಸಮಿತಿ ಇರುತ್ತದೆ. ಅದಕ್ಕೆ ನಾವು ಉತ್ತರಗಳನ್ನು ಕಳುಹಿಸಿಕೊಡುತ್ತೇವೆ. ಕ್ವಶ್ಚನ್ ಅವರ್ ಅನಂತರ ಕಾಲಿಂಗ್ ಅಟೆನ್‌ಶನ್, ಹಿಳಳ

ಇವನ್ನೆಲ್ಲಾ ತೆಗೆದುಕೊಳ್ಳುತ್ತೇವೆ. ನಾಳೆ ಸಿಸಿಳಿ ಮೊನ್ನೆಯಂದಿದ್ದರೂ ಉತ್ತರ ಕೊಡಬೇಕೆಂದು ಒತ್ತಾಯ ಮಾಡುತ್ತಾರೆ. ಅದಕ್ಕೆ ನಾನು ಹೇಳುವುದು, ಬಿಸಿನೆಸ್ ಅಡ್ವೈಸರಿ ಸಮಿತಿಯಲ್ಲಿ ನಾವು ಹತ್ತು ಪ್ರಶ್ನೆಗಳನ್ನು ಅಥವಾ ಐದು ಪ್ರಶ್ನೆಗಳಿಗೆ ಸದನದಲ್ಲಿ ಉತ್ತರ ಕೊಡಬೇಕೆಂದು ರೂಲ್ ಆಗಿದೆ ಏಕೆಂದರೆ, Business Advisory Committee cannot take decisions against the rules. ಇವೊತ್ತು ಸದನದಲ್ಲಿ ಉತ್ತರ ಕೊಡಬೇಕು ಎಂದರೆ ಅದಕ್ಕೆ ನಾವು ಬೇರೆ ಒಂದು ಪ್ರಾವಿಜನ್ ಮಾಡಬೇಕಾಗುತ್ತದೆ. ಈ ದಿನ ನಮ್ಮ ಅಜೆಂಡಾದಲ್ಲಿ ಸಿಸಿಳಿರ ಮೇಲೆ ಭರವಸೆ ಕೊಡತಕ್ಕಂತಹ ಪ್ರಶ್ನೆಗಳಿಗೆ ಉತ್ತರ ಓದುವುದು ಅಜೆಂಡಾದಲ್ಲಿ ಇಲ್ಲ. ಆದುದರಿಂದ ಪ್ರಶ್ನೆಗಳನ್ನು ಕೇಳಿದವರು ಅದನ್ನು ಸದನದ ಗಮನಕ್ಕೆ ತಂದಂತಾಗುತ್ತದೆ. ಆದರ ಮೇಲೆ ಚರ್ಚೆ ಮಾಡತಕ್ಕಂತಹ ಅವಶ್ಯಕತೆ ಇದ್ದರೆ ಅದಕ್ಕೆ ಬೇರೆ ಪ್ರಾವಿಷನ್‌ಗಳು ಇವೆ ಪಬ್ಲಿಕ್ ಇಂಪಾರ್ಟೆನ್ಸ್, ಇದ್ದರೆ ಅದಕ್ಕೆ ಬೇರೆ ಪ್ರಾವಿಷನ್‌ಗಳು ಇವೆ. ಯಾವುದೋ ಒಬ್ಬ ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಸಂಬಂಧಪಟ್ಟದ್ದು, ರಸ್ತೆಯೋ, ಸೇತುವೆಯೋ ಇರುತ್ತದೆ ಅದನ್ನು ಸದನದಲ್ಲಿ ಚರ್ಚೆ ಮಾಡುವ, ಹೇಳುವ ಅವಶ್ಯಕತೆ ಇರುವುದಿಲ್ಲ. ಆಗ ಸರಕಾರವು ಕೊಟ್ಟ ಉತ್ತರವು ಸದಸ್ಯರಿಗೆ ತಿಳಿದರೆ ಸಾಕು. ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ ಇದ್ದರೆ, ವಿಷಯ ಇದ್ದರೆ, ಅದನ್ನು ಸಿಸಿಳಿರಲ್ಲಿ ತರುವ ಅವಶ್ಯಕತೆ ಇರುವುದಿಲ್ಲ. ಬೇರೆ ಪ್ರಾವಿಷನ್‌ನಲ್ಲಿ ತರಬಹುದು, ಆದುದರಿಂದ ಸಿಸಿಳಿರ ಕಾರ್ಯವ್ಯಾಪ್ತಿಯನ್ನು ನಾವು ವಿನಾ ಕಾರಣ ಬಹಳ ದೂರ ತೆಗೆದುಕೊಂಡು ಹೋಗುತ್ತಾ ಇದ್ದೇವೆ. ತಾವು ಅಭಿಪ್ರಾಯ ಪಟ್ಟಹಾಗೆ, ಮಾನ್ಯ ವಿರೋಧಪಕ್ಷದ ನಾಯಕರು ಅಭಿಪ್ರಾಯ ಪಟ್ಟಹಾಗೆ, ಉತ್ತರವನ್ನು ಇಲ್ಲಿಯೇ ಒದಗಿಸ ಬೇಕೆಂದರೆ. ನಮಗೆ ಇದರ ಅಭ್ಯಂತರವಿಲ್ಲ. ನಾಲ್ಕು ದಿವಸ ಸಮಯ ಕೊಟ್ಟರೆ ನಾವು ಸಿಸಿಳಿರ ಕೆಳಗೆ ಐದು ಪ್ರಶ್ನೆಗಳು ಇದ್ದಾವು. ಅಂದರೆ ಅಲ್ಲಿ ಕ್ವಶ್ಚನ್ ಆವರ್ That means it is not the extension of Point of order. It will be an extension of Short-Notice question. A matter which is not a Point of Order must concern to the immediate problem. It need not be a matter of public importance.

ಆದುದರಿಂದ ನಾವು ಇಲ್ಲಿಯೇ ಉತ್ತರ ಕೊಡಬೇಕು ಎಂದರೆ, ಯಾವ ತರಹ ಇದನ್ನು ತರಬೇಕು, ಯಾವ ನಮೂನೆಯಲ್ಲಿ ಇದನ್ನು ತರಬೇಕು, ಎಂದು ಬಿಸಿನಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಮಾಡೋಣ. ಇಲ್ಲಿಯೇ ಉತ್ತರ ಕೊಡಬೇಕೆಂದರೆ ಕೊಡೋಣ. ಎಷ್ಟು ಉತ್ತರ ಕೊಡಬೇಕೆಂದರೆ ಅದರಂತೆ ಕೊಡೋಣ. ಯಾವ ತರಹ ಪ್ರಾವಿಜನ್ ಮಾಡಿಕೊಳ್ಳಬೇಕೋ ಮಾಡಿಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಯಾವ ತೀರ್ಮಾನ ಇದೆಯೋ ಅದನ್ನು ಒಪ್ಪಿ ನಡೆಯಬೇಕಾದುದು ಎಲ್ಲರ ಕರ್ತವ್ಯ. ಸಿಸಿಳಿರಲ್ಲಿ ಒಂದು ಮಾತ್ರ ಸ್ಪಷ್ಟವಾಗಿಲ್ಲ. ಉತ್ತರವನ್ನು ಈಗಲೇ ಕೊಡಲಿಕ್ಕೆ ಆಗದಿದ್ದರೆ ಒಂದು ದಿವಸ ಟೈಮ್ ತೆಗೆದುಕೊಳ್ಳಿ. ಅವರು ಹೇಳುತ್ತಾ ಇದ್ದಹಾಗೆ ಇದು ಪಾಯಿಂಟ್ ಆಫ್ ಆರ್ಡರ್ ಅಲ್ಲ. ಶಾರ್ಟ್‌ನೋಟೀಸ್ ಕ್ವಶ್ಚನ್‌ನ್ನು ಓವರ್ ರೂಲ್ ಮಾಡುವುದಕ್ಕಾಗುವುದಿಲ್ಲ. We should only be guided by the Rules of Procedure. ನಾನು ಹೇಳುವುದು, ಅವೊತ್ತು ಪಟೇಲ್‌ರವರು ಇರಲಿಲ್ಲ. ಬೊಮ್ಮಾಯಿಯವರು ಇದ್ದರು, ಅವರು ಕೋಪ ಮಾಡಿಕೊಂಡು ಅನವಶ್ಯಕವಾದ ವಿವಾದಗಳನ್ನು ಮಾಡುವ ಅವಶ್ಯಕತೆ ಇರಲಿಲ್ಲ. ಸ್ಪಷ್ಟವಾಗಿ ಒಂದು ತೀರ್ಮಾನಕ್ಕೆ ಮಾನ್ಯ ಲಕ್ಷ್ಮೀಸಾಗರ್‌ರವರೂ ಒಪ್ಪಿಕೊಂಡಿದ್ದರು. ಉತ್ತರವನ್ನು ಕೊಡುತ್ತೇವೆ ಸದನಕ್ಕೆ ತಿಳಿಸುತ್ತೇವೆ ಎಂದು. ಅದನ್ನು ಹೇಳುವಾಗ ಸ್ಪಷ್ಟವಾಗಿ ಹೇಳಿದ್ದರೆ, ಈ ವಿವಾದ ಬರುತ್ತಾ ಇರಲಿಲ್ಲ. ಆದು ಹೇಳುವುದು ಬಿಟ್ಟು, ಕೊಡುತ್ತೇನೆ, ಕೊಟ್ಟರೆ ಕೊಡಬಹುದು, ಕೊಡುವಂತಹದ್ದು ಇಲ್ಲ ಎಂದೆಲ್ಲಾ ಹೇಳಿದುದರಿಂದ ಈ ಕಾಂಟ್ರವರ್ಸಿ ಬಂದಿದೆ. ನಾನು ಹೇಳುವುದೇನೆಂದರೆ ಈಗ ಇದನ್ನು ಮುಗಿಸಿ ಬಿಡಬೇಕು. ನಮಗೆ ತಾವು ಒಂದು ರೂಲಿಂಗ್ ಕೊಟ್ಟು ಈ ವಾದವನ್ನು ಕೊವೆಗಾಣಿಸಬೇಕೆಂದು ತಮ್ಮಲ್ಲಿ ಪ್ರಾರ್ಥನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಈ ಚರ್ಚೆಯು ಬಹಳ ವಿಳಂಬವಾಯಿತು ದೀರ್ಘವಾಯಿತು. ಮಾನ್ಯ ಪಟೇಲ್‌ರವರ ಭಾಷಣವನ್ನು ಕೇಳಿದ್ದೇನೆ ಮತ್ತು ಇತರ ಸದಸ್ಯರ ಭಾಷಣವನ್ನು ಕೇಳಿದ್ದೇನೆ, ಈಗ ಕಲಮು ೦ ಸಿಸಿಳಿರ ಪ್ರಕಾರ ಉತ್ತರ ಕೊಡಲು ತಪ್ಪಿ ಜವಾಬ್ದಾರಿ ಇದೆ. ಇದು ಅರ್ಜಿ ಕೊಡತಕ್ಕಂಥದ್ದು ಅಲ್ಲ. ಅರ್ಜಿ ಕೊಡುವುದಕ್ಕೆ ಬೇರೆ ಕಲಮುಗಳು ಇವೆ. ಆದಕ್ಕೆ ಈಗ

ಉತ್ತರ ಎಲ್ಲಿ ಕೊಡಬೇಕು, ಎಲ್ಲಿ ಕೊಡಬಾರದು ಎಂದಿಲ್ಲ. ಯಾವಾಗ ಕೊಡಬೇಕೆಂದೂ ಇಲ್ಲ. ಆದರೆ ಅಧ್ಯಕ್ಷರು ಇದನ್ನು ಪ್ರಸ್ತಾಪ ಮಾಡಲಿಕ್ಕೆ ಪರವಾನಗಿ ಕೊಟ್ಟಿದ್ದಾರೆ. ಈಗ ಅವರಿಗೆ ಉತ್ತರ ಕೊಡಬೇಕು. ಉತ್ತರ ಯಾವಾಗ ಕೊಡಬೇಕು? ಎಲ್ಲಿ ಕೊಡಬೇಕೆನ್ನುವ ಪ್ರಶ್ನೆ ನಾವು ಮಾಡಿರುವಂಥ ವಿಷಯವಾಗಿದೆ. ಇದು ಸದನದ ಸ್ವತ್ತು ಆದಮೇಲೆ, ಅದು ಸಭೆಯ ಗಮನದಲ್ಲಿರಬೇಕು. ಅದಕ್ಕೆ ಉತ್ತರವನ್ನು ಬೇರೆ ಕಡೆ ಅಲ್ಲ, ಹೊರಗೂ ಅಲ್ಲ. ಹೊರಗೆ ಕೇಳಿದಾಗ ಪತ್ರವ್ಯವಹಾರ ಮಾಡಲಿಕ್ಕೆ ಸದನದ ಮುಂದೆ ತಾವು ಪರವಾನಗಿ ಕೊಟ್ಟಿದ್ದೀರಿ. ತಮ್ಮ ಜವಾಬ್ದಾರಿ ಅದಕ್ಕೆ ಉತ್ತರ ಹೊಂದಿಸ ತಕ್ಕಂಥದ್ದು. ಆದುದರಿಂದ ಈ ಎಲ್ಲಾ ಹೆಕ್ಕುಗಳ ಪ್ರಶ್ನೆ ಬಂದಿದೆ. ಮತ್ತು ಅವರು ಹೇಳಿದ ಹಾಗೆ ನಾವು ಕೇಳಿಕೊಂಡು ಹೋದರೆ, ಅವರದ್ದೊಂದು ಪ್ರತಿಷ್ಠೆ ಹೋಗುತ್ತದೆ. ಪ್ರತಿಷ್ಠೆಗೆ ಏಕೆ ಅವಕಾಶ ಮಾಡಬೇಕು? ಹಾಗೆ ಮಾಡುವ ಹಾಗಿಲ್ಲ ನಾನೂ ಕೂಡಾ ಮಂತ್ರಿಯಾಗಿದ್ದೆ. ನಾವೇನೂ ಪ್ರತಿಷ್ಠೆ ಮಾಡುವುದಕ್ಕೆ ಹೋಗಲಿಲ್ಲ. ಆದರೆ ಏತಕ್ಕಾಗಿ ಈ ಸರಕಾರ ನಡೆಸತಕ್ಕವರು ಪ್ರತಿಷ್ಠೆ ಮಾಡುವುದಕ್ಕೆ ಹೋಗುತ್ತಾರೆ? ಈಗ ಮಾನ್ಯ ರಾಮಕೃಷ್ಣಹೆಗಡೆಯವರು ಬಂದಿದ್ದಾರೆ, ಇದಕ್ಕೆ ಅವರು ಪರಿಹಾರ ಮಾಡುತ್ತಾರೆ ನೇರವಾಗಿ ಸದನಕ್ಕೆ ಉತ್ತರ ಕೊಡುತ್ತೇವೆಂದು ಹೇಳಿದರೆ ನಮ್ಮ ಚರ್ಚೆಯೇ ಇಲ್ಲ ನಾವು ಚರ್ಚೆ ಮಾಡುವುದಿಲ್ಲ. ಈ ಸದನಕ್ಕೆ ಸಾರ್ವಭೌಮತ್ವ ಇದೆ. ಬಿಸಿನೆಸ್ ಅಡ್ವೈಸರಿ ಕಮಿಟಿಗೆ ಏನೂ ಇಲ್ಲ. ನಮ್ಮ ಸದನದಲ್ಲಿ ನಮ್ಮ ಪ್ರಶ್ನೆಗಳಿಗೆ ಉತ್ತರ ಇಲ್ಲಿಯೇ ಬೇಕು. ದಯಮಾಡಿ ಮುಖ್ಯ ಮಂತ್ರಿಗಳು ಈ ವಿಷಯದಲ್ಲಿ ಪ್ರವೇಶ ಮಾಡಿ ಇದಕ್ಕೆ ಪರಿಹಾರ ಕೊಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಬಸವಲಿಂಗಪ್ಪನವರು ನಿಯಮವನ್ನು ಓದಿದ್ದಾರೆ. ಮಾನ್ಯ ಸದಸ್ಯರು ಕೊಟ್ಟಂತಹ ನೋಟೀಸ್ ಈ ಸಭೆಯಲ್ಲಿ ಗಮನ ಸೆಳೆಯುವುದಕ್ಕೆ ಮಾತ್ರ ಇರುತ್ತದೆ. ನಾನು ಪುನಃ ಹೇಳುತ್ತೇನೆ, ಈ ಬಗ್ಗೆ ಚರ್ಚೆ ಎತ್ತಿದಾಗ ಅದಕ್ಕೆ ಸರಕಾರ ಉತ್ತರ ಹೇಳಬೇಕಾಗಿಲ್ಲ. ಅನೇಕ ಶಾಸನ ಸಭೆಗಳಲ್ಲಿಯೂ ಕೂಡಾ ಲೋಕಸಭೆಯಲ್ಲಿಯೂ ಕೂಡಾ ಉತ್ತರ ಕೊಡುವುದಿಲ್ಲ. ಆದರೆ, ಈ ಮನೆಯಲ್ಲಿ ಒಂದು ತಿಳಿವಳಿಕೆ ಬಂದಿದೆ. ನಮ್ಮ ಸರಕಾರದ ಜವಾಬ್ದಾರಿ ಇದೆ ಅವರು ಗಮನ ಸೆಳೆದಾಗ ಉತ್ತರವನ್ನು ಕೊಡಬೇಕು. ಆ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದು ಸರಿಯಲ್ಲ ವೆಂದೂ ಒಂದು ತಿಳುವಳಿಕೆಗೆ ಬಂದಿದ್ದೇವೆ. ಉತ್ತರ ಕೊಡಬೇಕೆಂದು ಒಪ್ಪಿಕೊಂಡಿದ್ದೇವೆ. ನಿಯಮದ ಪ್ರಕಾರ ಈ ವಿಷಯಗಳಿಗೆ ಉತ್ತರವನ್ನು ಕೊಡಬೇಕಾಗಿಲ್ಲ. ಬರೀ ಸದನದ ಗಮನ ಸೆಳೆಯುವುದಂ ಇದು ನಿಯಮ.

ಶ್ರೀ ಎಸ್. ಬಂಗಾರಪ್ಪ.—ನೀವು ಹೇಳಿದ ಹಾಗೆ ನಿಯಮ ಎಲ್ಲಿದೆ? ಅಧ್ಯಕ್ಷರೇ ಇದು ತಮ್ಮ ಜವಾಬ್ದಾರಿ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಅವರು ಹೇಳಿ ಮುಗಿಸಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಯಮದಲ್ಲಿ ಸ್ಪಷ್ಟವಾಗಿ ಇದೆ. ಈ ಸಭೆಯ ಗಮನ ಸೆಳೆಯತಕ್ಕಂಥದ್ದಕ್ಕೆ ಮಾತ್ರ ಇದೆ. ಸದಸ್ಯರು ಗಮನಸೆಳೆಯುವುದು ಅದಕ್ಕೆ ಸರಕಾರ ಉತ್ತರ ಕೊಡಬೇಕು. ಆ ಉದ್ದೇಶವನ್ನು ಅರಿತುಕೊಂಡು ಒಂದು ತಿಳುವಳಿಕೆಗೆ ತಾವು ಬಂದಿದ್ದೀರಿ. ಹಿಷೀನೇ ನಿಯಮವನ್ನು ಓದಿನೋಡಿರಿ. ಓದಿ ಎಂದರೆ ಓದುತ್ತೇನೆ.

ಅಧ್ಯಕ್ಷರು.—ಅದನ್ನು ಓದಿರಿ.

SRI S. R. BOMMAI.—I quote Rule 334 of the Rules of Procedure and Conduct of Business in the Legislative Assembly.

> "A member who wishes to bring to the notice of the House any matter which is not a point of order shall give notice to the Secretary in writing stating briefly the point which he wishes to raise in the House together with reasons for wishing to raise it and he shall be permitted to raise it only after the Speaker has given his consent and at such time and date as the Speaker may fix."

ಸದನದ ಗಮನ ಸೆಳೆಯುವಂಥದ್ದಕ್ಕೆ ಬೇರೆ, ಬೇರೆ ನಿಯಮಗಳು ಇವೆ. ಅದಕ್ಕೆ ಸರಕಾರ ಉತ್ತರ ಕೊಡಬೇಕಾಗಿಲ್ಲ. ಈ ಅರ್ಥ ಇದರಲ್ಲಿ ನಿಯಮದ ಪ್ರಕಾರ ಬರುತ್ತದೆ. ಆದರೆ ಹೊಸ ನಿಯಮ ಬಂದ ಮೇಲೆ, ನಾವು ಒಂದು ತಿಳುವಳಿಕೆಗೆ ಬಂದಿದ್ದೇವೆ. ಇಂಥಾದ್ದರ ಮೇಲೆ ನೋಟೀಸ್ ಕೊಟ್ಟ ಮೇಲೆ ಅಜೆಂಡಾದಲ್ಲಿ ಅದು ಹೋಗಬೇಕು. ಚರ್ಚೆ ಇಲ್ಲದೇನೇ ಉತ್ತರ ಕೂಡಾ ಜವಾಬ್ದಾರಿಯಿಂದ ಸದಸ್ಯರಿಗೆ ಬರಬೇಕೆಂಬ ತಿಳುವಳಿಕೆಗೆ ನಾವು ಬಂದಿದ್ದೇವೆ. ತಾವೂ ಮೊನ್ನೆ ಹೇಳಿದ್ದೀರಿ. ಅವೊತ್ತು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದು ಚರ್ಚೆಯಾಗಿದೆ. ಮತ್ತೆ ನೋಟೀಸ್‌ನ್ನು ತೆಗೆದುಕೊಳ್ಳಬೇಕು. ಸರಕಾರ ಉತ್ತರ ಕೊಡಬೇಕೆಂದೂ ಆಗಿದೆ. ಮಾನ್ಯ ಪಟೇಲ್‌ರವರೂ ಕೂಡಾ ಕೆಲವು ವಿಚಾರಗಳನ್ನು, ನಿಯಮಗಳನ್ನು ಹೇಳಿದ್ದರು

ಶ್ರೀ ಕೆ. ಎಚ್. ಶ್ರೀನಿವಾಸ್.—ಇಂತಹ ಕಿರಿಕಿರಿ ನಿಯಮವನ್ನು ತೆಗೆದುಬಿಡಿರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಯಮಗಳನ್ನು ತಿದ್ದಬೇಕಾದರೂ ಅಧ್ಯಕ್ಷರಿಗೆ ಅಧಿಕಾರ ಇದೆ.

ಅಧ್ಯಕ್ಷರು.—ತಮ್ಮಲ್ಲಿ ತಯಾರಿದ್ದ ಉತ್ತರಗಳನ್ನು ಇವೊತ್ತೇ ಕೊಡಿ ತಯಾರು ಇಲ್ಲದಿದ್ದು ಯಾವಾಗ ಕೊಡುತ್ತೀರಿ ಎಂದು ಹೇಳಿ. ಸದನದಲ್ಲಿ ಕೊಡುತ್ತೀರೋ ? ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸದನದಲ್ಲಿ ಉತ್ತರ ಕೊಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ

ಅಧ್ಯಕ್ಷರು.—ಸದನದಲ್ಲಿ ಉತ್ತರ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಕೊಡಿ ಎಂದು ಹೇಳಿದ್ದೇನೆ.

SRI K. H. PATIL.—The Chair has already given a ruling. How far it stands today ?

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಇದರ ಬಗ್ಗೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ಪ್ರಸ್ತಾವ ಎತ್ತಿದುದರ ಬಗ್ಗೆ ಭಿನ್ನಾಭಿಪ್ರಾಯ ಬಂದಿದೆ. ನಾನು ಅನೇಕ ಸಲ ಸಲಹೆ ಮಾಡಿದ್ದೇನೆ, ಚರ್ಚೆ ಇದನ್ನು ಮಾಡೋಣ. ಅಧ್ಯಕ್ಷರು ಸಭೆ ಕರೆಯಲಿ, ಅದಕ್ಕೆ ನನ್ನದೇನೂ ಆಭ್ಯಂತರವಿಲ್ಲ.

ಅಧ್ಯಕ್ಷರು.—ಈಗ ಉತ್ತರ ಕೊಡುವುದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ನಾನು ಇದನ್ನು ಸರಿಪಡಿಸುತ್ತೇನೆ. ಹಿಂದೆ ಏನು ಕಾಲಿಂಗ್ ಅಟೆನ್‌ಷನ್ಸ್‌ಗಳು ಇವೆ ಅದಕ್ಕೂ ಕೂಡಾ ಉತ್ತರ ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ೩೫ಳಿರ ಕೆಳಗೂ ಹಿಂದಿನ ವಿಷಯಗಳು ಇದ್ದರೆ ಅದಕ್ಕೂ ಉತ್ತರ ಕೊಡಿಸುವ ವ್ಯವಸ್ಥೆ ಮಾಡಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ನಾನು ತಮ್ಮ ಪರವಾನಿಗೆಯನ್ನು ಪಡೆದು. ಒಂದು ಸೂಚನೆಯನ್ನು ಮಾಡುತ್ತೇನೆ. ನಿಯಮ ೩೫ಳಿರ ಪ್ರಕಾರ ಅಕಸ್ಮಾತ್ ಆಗಿ ಯಾವ ದಾದರೊಂದು ಘಟನೆ ಘಟಿಸಿದ್ದು ಆ ವಿಷಯವನ್ನು ಬೇರೆ ಯಾವುದೇ ರೀತಿಯಲ್ಲಿ ಎತ್ತತಕ್ಕಂಥ ಅವಕಾಶಗಳು ಇಲ್ಲದಿದ್ದರೆ ಅಂತಹ ಸಂದರ್ಭಗಳಲ್ಲಿ ನಿಯಮ ೩೫ಳಿರ ಪ್ರಕಾರ ಎತ್ತಬಹುದು. ಈ ಸದನದಲ್ಲಿ ಮೆನ್‌ಷನ್ ಮಾಡುವುದು ಎಂದು ಅರ್ಥ ಬರುತ್ತದೆ. ಒಬ್ಬ ಮಾನ್ಯ ಸದಸ್ಯರು ಮೆನ್‌ಷನ್ ಮಾಡಿದ ತಕ್ಷಣ ಉತ್ತರ ಕೊಡಲೇ ಬೇಕೆಂದು ಕಡ್ಡಾಯವಾಗಿ ಎಲ್ಲಿಯೂ ಕೂಡ ಇಲ್ಲ. ಆದರೂ ಸಹ ನಾವು ಕಳೆದ ಎರಡು ವರ್ಷಗಳಿಂದ ಬಹಳ ಮಹತ್ವವುಳ್ಳ ವಿಷಯಗಳಿಗೆ ಮಾನ್ಯ ಸದಸ್ಯರು ಎತ್ತಿದ ತಕ್ಷಣ ಉತ್ತರವನ್ನು ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಮಾಹಿತಿ ಇದ್ದರೆ ತಕ್ಷಣ ಉತ್ತರ ಕೊಟ್ಟಿದ್ದಾರೆ. ಅಂತಹ ಉದಾಹರಣೆಗಳು ಕೂಡ ಇವೆ. ಮಾಹಿತಿ ಇಲ್ಲದಿದ್ದರೆ ಮಾಹಿತಿಯನ್ನು ತರಿಸಿಕೊಂಡು ಆ ನಂತರ ಉತ್ತರವನ್ನು ಕೊಟ್ಟಿರುವ ಉದಾಹರಣೆಗಳೂ ಕೂಡ ಇವೆ ಆದ್ದರಿಂದ ನಾನು ಒಂದು ಸೂಚನೆಯನ್ನು ಮಾಡುತ್ತೇನೆ ಅದೇನೆಂದರೆ ಈ ಸದನದಲ್ಲಿ ಮೆನ್‌ಷನ್ ಮಾಡಿದಂತಹ ಪ್ರತಿಯೊಂದು ವಿಷಯಕ್ಕೂ ಉತ್ತರ ಕೊಡಲೇ ಬೇಕು, ಅವರ ಬಾಯಿಂದ ಉತ್ತರವನ್ನು ಪಡೆಯಲೇ ಬೇಕು ಎನ್ನತಕ್ಕಂಥ ಇಚ್ಛೆ ಮಾನ್ಯ ಸದಸ್ಯರಿಗಿದ್ದರೆ ಅವರು ದಯಮಾಡಿ ಆದನ್ನು ಪ್ರಶ್ನೆಯ ರೂಪದಲ್ಲಿ ಕೊಡಲಿ. ಅದಕ್ಕೆ ನಾವು ಪ್ರಶ್ನೆಯ ರೂಪದಲ್ಲಿಯೇ ಉತ್ತರವನ್ನು ಮಾಡಿ ಕೊಡುತ್ತೇವೆ.

ಶ್ರೀ ಕೆ. ಹೆಚ್. ಪಾಟೀಲ್ —ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂಥ ಮಾತು ಬಹಳ ಯೋಗ್ಯವಾಗಿದೆ. ಆ ಮಾತನ್ನು ಅವರು ಮೊದಲೇ ಹೇಳಿದ್ದರೆ ಇಷ್ಟು ಚರ್ಚೆಯಾಗುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

IX. ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರ ವಿತರಣೆಯಲ್ಲಿ ಆದ ಅನ್ಯಾಯದ ಬಗ್ಗೆ

ಸಭಾಧ್ಯಕ್ಷರು.—ಶ್ರೀ ಇದಿನಬ್ಬನವರೇ ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಬಿ.ಎಂ. ಇದಿನಬ್ಬ.—ಸನ್ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರ ವಿತರಣೆಯಲ್ಲಿ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸುವ ಬಗ್ಗೆ ನಾನು ತಮ್ಮ ಮುಖೇನ ಮಾನ್ಯ ಆಹಾರ ಮಂತ್ರಿಗಳ ಗಮನವನ್ನು ಸೆಳೆಯಲು ಬಯಸುತ್ತೇನೆ. ಮತ್ತು ಅವರಿಂದ ಈ ಬಗ್ಗೆ ಉತ್ತರವನ್ನು ಸಹ ಕೇಳಬಯಸುತ್ತೇನೆ.

ಶ್ರೀ ಜಿ ಬಸವಣ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಗೆ ಸುಮಾರು ೨೫೦೦ ಟನ್ ಅಕ್ಕಿಯನ್ನು ಈಗ ಕೊಡುತ್ತಿದ್ದೇವೆ. ಪಡಿತರ ಪದ್ಧತಿಯು ವಿರಿಯಾದಲ್ಲಿ ಮಂಗಳೂರು ಮತ್ತು ಉಡುಪಿ ಬರುತ್ತವೆ. ಪಡಿತರ ಪದ್ಧತಿಯ ಪ್ರಕಾರ ಮೂರು ಯೂನಿಟ್‌ಗಳಿಗೆ ೨೫ ಕೆ.ಜಿ. ಅಕ್ಕಿಯನ್ನು ಕೊಡುತ್ತಿದ್ದೇವೆ. ಪುರಸಭೆಯ ವ್ಯಾಪ್ತಿಯಲ್ಲಿ ಬರುವಂತಹ ಕಾರ್ಡ್‌ದಾರರಿಗೆ ೧೨ ಕೆ. ಜಿ. ಯಿಂದ ೧೫ ಕೆ. ಜಿ. ಯವರೆವಿಗೂ ಅಕ್ಕಿಯನ್ನು ಕೊಡುತ್ತಿದ್ದೇವೆ. ಅದೇ ಗ್ರಾಮಾಂತರ ಪ್ರದೇಶದ ಕಾರ್ಡ್‌ದಾರರಿಗೆ ಕಾರ್ಡ್ ಒಂದಕ್ಕೆ ೫ ಕೆ.ಜಿ. ಅಕ್ಕಿಯನ್ನು ಕೊಡುತ್ತಿದ್ದೇವೆ.

X. ಭೂ ನ್ಯಾಯಮಂಡಲಿ ಹಾಗೂ ಜಿಲ್ಲಾ ಅಭಿವೃದ್ಧಿ/ಸಮಿತಿಗಳ ಸಭೆಯನ್ನು ವಿಧಾನ ಸಭೆಯು ನಡೆಯುವ ಕಾಲದಲ್ಲಿ ನಡೆಸುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೇ ಭೂ ನ್ಯಾಯ ಮಂಡಲ ಹಾಗೂ ಜಿಲ್ಲಾ ಅಭಿವೃದ್ಧಿ ಸಮಿತಿಗಳ ಸಭೆಯನ್ನು ವಿಧಾನ ಮಂಡಲ ಅಧಿವೇಶನದ ಕಾಲದಲ್ಲಿ ನಡೆಯುವಂತೆ ಏರ್ಪಾಡು ಮಾಡಬೇಕೆಂದು ನಾನು ಮಾನ್ಯ ಕಂದಾಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಂಡು ಈ ಬಗ್ಗೆ ಅವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಸ್. ಆರ್. ಜೊಮ್ಮಾಯಿ —ಸನ್ಮಾನ್ಯ ಅಧ್ಯಕ್ಷರೇ ಭೂ ನ್ಯಾಯ ಮಂಡಲಗಳ ಮುಂದೆ ಬಹಳ ಹೆಚ್ಚು ಕೆಲಸವಿದೆ. ಶಾಸಕರ ಅನುಕೂಲಕ್ಕೆ ಸರಿಯಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಕಾನೂನು ಪ್ರಕಾರ ಆ ರೀತಿ ಮಾಡುವುದಕ್ಕೆ ಬರುವುದಿಲ್ಲ. ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಶಾಸಕರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಭೂ ನ್ಯಾಯ ಮಂಡಲಿಗಳ ಸಭೆ ನಡೆಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

XI. ಮೈಸೂರು ಮಧುವನದಲ್ಲಿ ಡಿಸ್ಪಿಲರಿಗೆ ಪರವಾನಿಗಿಯನ್ನು ಕೊಟ್ಟಿರುವುದು.

ಶ್ರೀ ವೇದಾಂತ ಹಮ್ಮಿಗೆ.—ಸನ್ಮಾನ್ಯ ಅಧ್ಯಕ್ಷರೇ ಮೈಸೂರು ನಗರದಲ್ಲಿ ನಾಗರೀಕರು ವಾಸ ಮಾಡುತ್ತಿರುವ ಮಧುವನದಲ್ಲಿ ಡಿಸ್ಪಲರಿಗೆ ಪರ್ಮಿಷನ್ ಕೊಡುತ್ತಿರುವ ಬಗ್ಗೆ ನಾಗರೀಕರಿಂದ ನನಗೆ ಗೊತ್ತಾಯಿತು ಈ ಬಗ್ಗೆ ನಾನು ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ರಮೇಶ್ ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ ಅಂತಹ ವಿಷಯು ಯಾವುದೂ ಸರ್ಕಾರದ ಮುಂದೆ ಇಲ್ಲವೆಂದು ಮಾನ್ಯ ಸದಸ್ಯರಿಗೆ ತಿಳಿಸಲು ಇಷ್ಟಪಡುತ್ತೇನೆ.

XII. ಕೋಡಿಬೆಂಗ್ರೆಯಲ್ಲಿ ಹಿರಿಯ ಪ್ರಾಥಮಿಕ ಪಾಠಶಾಲೆಯ ಅಧ್ಯಾಪಕರಿಂದ ಅವ್ಯವಹಾರಗಳು.

ಶ್ರೀ ಬಸವರಾಜ್.—ಸನ್ಮಾನ್ಯ ಅಧ್ಯಕ್ಷರೇ ಬ್ರಹ್ಮಾವರ ಮತದಾರ ಕ್ಷೇತ್ರದ ಕೋಡಿಬಂಗ್ರೆಯಲ್ಲಿರುವ ಹಿರಿಯ ಪ್ರಾಥಮಿಕ ಪಾಠಶಾಲೆಯ ಅಧ್ಯಾಪಕರ ಅವ್ಯವಹಾರದ ಬಗ್ಗೆ ನಾನು ಮಾನ್ಯ ಶಿಕ್ಷಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ. ಮತ್ತು ಈ ಬಗ್ಗೆ ಸೂಕ್ತ ಉತ್ತರವನ್ನು ಸಹ ಕೇಳಬಯಸುತ್ತೇನೆ.